ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಫೆಬ್ರವರಿ 27, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 286 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

# ಪಾಲಿಕೆ ಬಜೆಟ್ ಸಭೆಗೆ ವಿಪಕ್ಷ ಸದಸ್ಯರ ಆಕ್ಷೇಪ

## ಸಭೆ ಮುಂದೂಡಿದ ಮೇಯರ್, ಇಂದು ಮಹಾನಗರ ಪಾಲಿಕೆ ಬಜೆಟ್ ಮಂಡನೆ

ದಾವಣಗೆರೆ, ಫೆ. 26- ಸೋಮವಾರ ಮಧ್ಯಾಹ್ನ 3 ಗಂಟೆಗೆ ನಿಗದಿಪಡಿಸಲಾಗಿದ್ದ ಮಹಾನಗರ ಪಾಲಿಕೆಯ ಬಜೆಟ್ ಸಭೆಯನ್ನು ಫೆ.27ರ ಮಂಗಳವಾರ ಬೆಳಿಗ್ಗೆ ಮುಂದೂಡಲಾಯಿತು.

ಬಜೆಟ್ ಮಂಡನಾ ಸಭೆಯ ದಿನಾಂಕ ನಿರ್ಧರಿಸುವಲ್ಲಿ ನಿಯಮ ಪಾಲಿಸಿಲ್ಲ ಹಾಗೂ ಮಧ್ಯಾಹ್ನ ಸಭೆ ನಿಗದಿಪಡಿಸುವುದಕ್ಕೆ ಆಕ್ಷೇಪಿಸಿ, ಬಜೆಟ್ ಸಭೆ ಮುಂದೂಡುವಂತೆ ಪ್ರತಿ ಪಕ್ಷದ ಸದಸ್ಯರು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಪಾಲಿಕೆ ಮೇಯರ್ ಬಿ.ಹೆಚ್. ವಿನಾಯಕ ಅವರು ಮುಂದೂಡಿಕೆ ನಿರ್ಧಾರ ಪ್ರಕಟಿಸಿದರು.

ಸಭೆಯನ್ನು ಮಧ್ಯಾಹ್ನ ನಿಗದಿಪಡಿಸಿರುವುದರಿಂದ ವಿಷಯಗಳ ಬಗ್ಗೆ ಚರ್ಚೆ ಮಾಡಲು ಸಮಯವೇ ಇಲ್ಲದಂತಾಗುತ್ತದೆ. ಪಾಲಿಕೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬಜೆಟ್ ಸಭೆಯನ್ನು ಮಧ್ಯಾಹ್ನ ನಿಗದಿಪಡಿಸಲಾಗಿದೆ ಎಂದು ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಬಜೆಟ್ ಮಂಡಿಸುವಾಗ ಸುದೀರ್ಘ ಚರ್ಚೆ ನಡೆಯಬೇಕಿದೆ. ಆದರೆ 3 ಗಂಟೆಗೆ ಆರಂಭವಾಗುವ ಸಭೆಯಲ್ಲಿ ಏನೂ ಚರ್ಚಿಸಲಾಗದು. ನೀವು ಓದಿದ್ದು ಕೇಳಿಸಿಕೊಂಡು ಹೋಗಲಾಗದು. ಇದು ಮೇಯರ್ ಹಾಗೂ ಅಧಿಕಾರಿಗಳ ಬೇಜವಾಬ್ದಾರಿತನ ತೋರಿಸುತ್ತದೆ ಎಂದರು.

ಪಾಲಿಕೆ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ರೀತಿ ಸಮಯ ನಿಗದಿಪಡಿಸಲಾಗಿದೆ ಎಂದು ಆರೋಪಿಸಿದ ಸದಸ್ಯೆ ಉಮಾ ಪ್ರಕಾಶ್, ಎಲ್ಲಿಯಾದರೂ ಮುಹೂರ್ತ ಕೇಳಿ ಸಮಯ ನಿಗದಿಪಡಿಸಲಾಗಿದೆಯೇ? ಎಂದರು.

ಕೆ.ಎಂ. ವೀರೇಶ್, ಎಸ್.ಟಿ. ವೀರೇಶ್, ಶಿವಾನಂದ ಇತರರು ಸಮಯ ನಿಗದಿಗೆ ಆಕ್ಷೇಪಿಸಿದರು.

ನನಗೆ ಸಭೆಯ ನೋಟಿಸ್ ತಲುಪಿದ್ದು 21ನೇ ತಾರೀಖು. ಸಭೆ ನಿರ್ಧಾರವಾಗಿ 7 ದಿನಗಳ ನಂತರ ಸಭೆ ನಡೆಸಬೇಕು. ಆದರೆ ಅದಕ್ಕೂ ಮೊದಲೇ ಸಭೆ ನಡೆಸಲಾಗಿದೆ. ಸದಸ್ಯರಿಗೆ ಮರ್ಯಾದೆಯೇ ಇಲ್ಲದಂತಾಗಿದೆ. ಸದಸ್ಯರು ಬೇಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರಸನ್ನಕುಮಾರ್ ಕಿಡಿಕಾರಿದರು.

'20ನೇ ತಾರೀಖು ತಮ್ಮ ಮನೆಗೆ ನೋಟೀಸು ತಲುಪಿಸುವಾಗ ತಾವು ಮನೆಯಲ್ಲಿರಲಿಲ್ಲ' ಎಂದು ಪರಿಷತ್ ಕಾರ್ಯದರ್ಶಿ ಉತ್ತರಿಸಿದಾಗ, ಅಸಮಾಧಾನಕೊಂಡ ಪ್ರಸನ್ನ ಕುಮಾರ್, ನನ್ನ ಮನೆಯ ಸಿಸಿಟಿವಿ ಫೂಟೇಜ್ ತೋರಿಸಿ, ಅಂದು ನಾನು ಮನೆಯಲ್ಲಿರುವುದು ಸಾಬೀತು ಪಡಿಸುತ್ತೇನೆ. ಪರಿಷತ್ ಕಾರ್ಯದರ್ಶಿ ಸುಳ್ಳು ಹೇಳುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಪಟ್ಟು ಹಿಡಿದರು.

ನಾನು ಸುಳ್ಳು ಹೇಳಿದ್ದು ಸಾಬೀತಾದರೆ ನಾನು ರಾಜೀನಾಮೆ ಕೊಡುತ್ತೇನೆ. ನಿಮ್ಮ ಮಾತು ಸುಳ್ಳಾದರೆ ನೀವು ರಾಜೀನಾಮೆ ಕೊಡುತ್ತೀರಾ? ಎಂದು ಪರಿಷತ್ ಕಾರ್ಯದರ್ಶಿಗೆ ಖಾರವಾಗಿ ಪ್ರಶ್ನಿಸಿದರು.

ಸದಸ್ಯರಿಗೆ ಅವಮಾನವಾದರೆ ನಾವೂ ಸುಮ್ಮನಿರುವುದಿಲ್ಲ. ಪರಿಷತ್ ಕಾರ್ಯದರ್ಶಿಗೆ ಕಾರಣ ಕೇಳಿ ನೋಟೀಸ್ ನೀಡಿ, ಸಭೆಯನ್ನು ಮುಂದುವರೆಸಿ ಎಂದು ಸದಸ್ಯ ಎ.ನಾಗರಾಜ್ ಹೇಳಿದರಾದರೂ, ಮೂರನೇ ಬಾರಿ ಇಂತಹ ಘಟನೆ ನಡೆಯುತ್ತಿದ್ದು ಪರಿಷತ್ ಕಾರ್ಯದರ್ಶಿ ಬೇಜವಾಬ್ದಾರಿ ವರ್ತನೆ (4ನೇ ಪುಟಕ್ಕೆ)



### ಅನುದಾನ ಹಂಚಿಕೆ ತಾರತಮ್ಯ: ವೇದಿಕೆ ಮೇಲೇರಲು ನಿರಾಕರಿಸಿದ ಉಪ ಮೇಯರ್

ಸಭೆಯಲ್ಲಿ ಉಪ ಮೇಯರ್ ಯಶೋಧ ಹೆಗ್ಗಪ್ಪ ಅವರನ್ನು ವೇದಿಕೆಗೆ ಆಹ್ವಾನಿಸಲಾಯಿತು. ಆದರೆ ನಮ್ಮ ವಾರ್ಡ್‌ಗೆ ಅನುದಾನ ನೀಡುವಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಆಕ್ಷೇಪಿಸಿ ಅವರು ವೇದಿಕೆ ಏರಲು ನಿರಾಕರಿಸಿದರು. ಕಾಂಗ್ರೆಸ್ ಸದಸ್ಯರ ವಾರ್ಡುಗಳಿಗೆ ಕೋಟಿ ಗಟ್ಟಲೆ ಅನುದಾನ ಹಂಚಿಕೆಯಾಗಿದೆ. ಬಿಜೆಪಿ ಸದಸ್ಯರ ವಾರ್ಡುಗಳಿಗೆ ತಾರತಮ್ಯ ಮಾಡಲಾಗಿದೆ ಎಂದು ವಿಪಕ್ಷ ನಾಯಕ ಪ್ರಸನ್ನ ಕುಮಾರ್ ಆರೋಪಿಸಿದರು.

# ಹಾಲಿ ಸಂಸದರಿಗೆ ಆದ್ಯತೆ

## ಲೋಕಸಭೆ: ವರಿಷ್ಠರಿಗೆ ರಾಜ್ಯ ಬಿಜೆಪಿ ಪ್ರಮುಖರ ಶಿಫಾರಸ್ಸು

ಬೆಂಗಳೂರು, ಫೆ. 26 - ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸದ ಹಾಲಿ ಸಂಸದರನ್ನು ಹೊರತುಪಡಿಸಿ, ಉಳಿದಂತೆ ಎಲ್ಲ ಸಂಸದರಿಗೆ ಟಿಕೆಟ್ ನೀಡುವಂತೆ ರಾಜ್ಯ ಬಿಜೆಪಿಯ ಪ್ರಮುಖರು ಪಕ್ಷದ ವರಿಷ್ಠರಿಗೆ ಶಿಫಾರಸ್ಸು ಮಾಡಿದ್ದಾರೆ.

ಇತ್ತೀಚೆಗೆ ನಗರದ ಕೇಶವ ಕೃಪಾದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನೀಡಲು ಶಿಫಾರಸ್ಸು ಮಾಡಲಾಗಿದೆ.

ರಾಜಧಾನಿ ಬೆಂಗಳೂರಿನ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಕೇಂದ್ರ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರನ್ನು ಕಣಕ್ಕಿಳಿಸಲು ವರಿಷ್ಠರು ಚಿಂತನೆ ನಡೆಸಿದ್ದಾರೆ ಎಂಬ ಮಾಹಿತಿಗಳಿದ್ದರೂ, ಹಾಲಿ ಸಂಸದ ತೇಜಸ್ವಿ ಸೂರ್ಯ ಅವರಿಗೆ ಟಿಕೆಟ್ ನೀಡಲು ಶಿಫಾರಸ್ಸು ಮಾಡಲಾಗಿದೆ.

ಇದೇ ರೀತಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಹಾಲಿ ಸಂಸದ ಪಿ.ಸಿ.ಮೋಹನ್ ಬದಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಕಣಕ್ಕಿಳಿಸಲು ವರಿಷ್ಠರು ಆಸಕ್ತಿ ತೋರಿದ್ದರೂ, ಇಲ್ಲಿನ ಪ್ರಮುಖರು ಮಾತ್ರ ಹಾಲಿ ಸದಸ್ಯರನ್ನೇ ಮುಂದುವರಿಸಲು ನಿರ್ಧರಿಸಿದ್ದಾರೆ.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಸ್ಪರ್ಧೆಗೆ ಆಸಕ್ತಿ ತೋರದ ಹಿನ್ನೆಲೆಯಲ್ಲಿ, ಆ ಕ್ಷೇತ್ರದಿಂದ ಯಾರ ಹೆಸರನ್ನೂ ಶಿಫಾರಸು ಮಾಡಲಾಗಿಲ್ಲ.

ಚಾಮರಾಜನಗರ ಕ್ಷೇತ್ರದಿಂದ ಸಂಸದ ವಿ. ಶ್ರೀನಿವಾಸಪ್ರಸಾದ್ ಅವರು ಸ್ಪರ್ಧಿಸಲು ನಿರಾಸಕ್ತಿ ತೋರಿರುವ ಹಿನ್ನೆಲೆಯಲ್ಲಿ, ಅವರ ಅಳಿಯನಿಗೆ ಟಿಕೆಟ್ ನೀಡಲು ಶಿಫಾರಸ್ಸು ಮಾಡಲಾಗಿದೆ.

ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸ್ಪರ್ಧಿಸಲು ಮಾಜಿ ಸಚಿವ ಡಾ.ಕೆ.ಸುಧಾಕರ್ ಆಸಕ್ತಿ ಹೊಂದಿದ್ದರೂ, ಈ ಕ್ಷೇತ್ರದಿಂದ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್.ವಿಶ್ವನಾಥ್ ಅವರ ಪುತ್ರ ಅಶೋಕ್ ಅವರಿಗೆ ಟಿಕೆಟ್ ನೀಡುವಂತೆ ಶಿಫಾರಸ್ಸು ಮಾಡಿದೆ.

ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಹಾಲಿ ಸಂಸದ ಬಸವರಾಜು ನಿರಾಸಕ್ತಿ ತೋರಿಸಿರುವ ಹಿನ್ನೆಲೆಯಲ್ಲಿ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಇಲ್ಲವೇ ವಿ.ಸೋಮಣ್ಣ ಅವರ ಮಧ್ಯೆ ಟಿಕೆಟ್‌ಗಾಗಿ ಫೈಟ್ ನಡೆದಿದ್ದು, ಈ ಹಿನ್ನೆಲೆಯಲ್ಲಿ ಈ ಕ್ಷೇತ್ರದಿಂದ ಯಾರಿಗೆ ಟಿಕೆಟ್ ನೀಡಬೇಕು ಎಂಬ ಬಗ್ಗೆ ಯಾವುದೇ ಶಿಫಾರಸ್ಸು ಮಾಡಲಾಗಿಲ್ಲ.

ಹಾಲಿ ಸಂಸದರ ಪೈಕಿ ಯಾರು ಕಣಕ್ಕಿಳಿಯಲು ನಿರಾಸಕ್ತಿ ತೋರುತ್ತಾರೋ ಅವರನ್ನು ಹೊರತುಪಡಿಸಿ, ಉಳಿದಂತೆ ಬಹುತೇಕ ಹಾಲಿ ಸಂಸದರಿಗೆ (4ನೇ ಪುಟಕ್ಕೆ)

**ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಹಾಲಿ ಸಂಸದ ಜಿ.ಎಂ.ಸಿದ್ದೇಶ್ವರ ಇಲ್ಲವೇ ಅವರ ಕುಟುಂಬದವರಿಗೆ ಟಿಕೆಟ್ ನೀಡುವಂತೆ ಶಿಫಾರಸ್ಸು.**

## ಯುವ ಜನರಿಗೆ ಉದ್ಯೋಗ ಸೃಷ್ಟಿ, ತರಬೇತಿ : ಸಿಎಂ

ಬೆಂಗಳೂರು, ಫೆ. 26 - ನಿರುದ್ಯೋಗಿ ಯುವ ಜನರಿಗೆ ಯುವನಿಧಿ ಜೊತೆಗೆ ಉದ್ಯೋಗ ಸೃಷ್ಟಿ ಮತ್ತು ಉದ್ಯೋಗಕ್ಕೆ ಅಗತ್ಯ ತರಬೇತಿಯನ್ನೂ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಬೃಹತ್ ಯುವ ಸಮೃದ್ಧಿ ಸಮ್ಮೇಳನ ಮತ್ತು ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ವಿದ್ಯಾವಂತ (4ನೇ ಪುಟಕ್ಕೆ)

## ಕಾಂಗ್ರೆಸ್ ಗೆದ್ದರೆ ಅಗ್ನಿಪಥ್ ರದ್ದು

ನವದೆಹಲಿ, ಫೆ. 26 -ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸೈನ್ಯದ ನೇಮಕಕ್ಕೆ ಸಂಬಂಧಿಸಿದ ಅಗ್ನಿಪಥ್ ಯೋಜನೆ ನಿಲ್ಲಿಸಿ, ಹಳೆಯ ಪದ್ಧತಿ ಜಾರಿಗೆ ತರುವುದಾಗಿ ಕಾಂಗ್ರೆಸ್ ತಿಳಿಸಿದೆ. ಅಗ್ನಿಪಥ್ ನೇಮಕದ ಪ್ರಕ್ರಿಯೆ ಪೂರೈಸಿದ್ದರೂ, ಇದುವರೆಗೂ ನೇಮಕಾತಿ ಪತ್ರ ಪಡೆಯದ ಎರಡು ಲಕ್ಷ ಯುವಕರ ನೇಮಕಾತಿ ಆದೇಶ ಹೊರಡಿಸಬೇಕು ಎಂದೂ ಪಕ್ಷ ಒತ್ತಾಯಿಸಿದೆ.

## ಭದ್ರಾ ನಾಲೆ ಹರಿಯುವಿಕೆ ಪ್ರಮಾಣ ವೀಕ್ಷಿಸಿದ ಜಿಲ್ಲಾಧಿಕಾರಿ ವೆಂಕಟೇಶ್



ದಾವಣಗೆರೆ, ಫೆ.26- ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ಅವರು ಸೋಮವಾರ ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ಭದ್ರಾ ಬಲದಂಡೆ ಕಾಲುವೆ ಯಲ್ಲಿ ಹರಿಯುತ್ತಿರುವ ನೀರಿನ ಪ್ರಮಾಣ ಪರಿಶೀಲಿಸಿ ರೈತರೊಂದಿಗೆ ಸಮಾಲೋಚನೆ ನಡೆಸಿದರು. ನಂತರ ಭದ್ರಾ ಅಚ್ಚುಕಟ್ಟು ಪ್ರದೇಶವಾದ ಬಾಡ, ಶಂಕರನಹಳ್ಳಿ, ಅಣಬೇರು, ಸೋಮನಹಳ್ಳಿ, ಗೆದ್ದಲಹಟ್ಟಿ, ನಲ್ಕುಂದ, ತ್ಯಾವಣಗಿ ಪ್ರದೇಶಗಳಿಗೆ ಭೇಟಿ ನೀಡಿ ಅನಧಿಕೃತವಾಗಿ ಅಳವಡಿಸಿಕೊಂಡಿದ್ದ ಪಂಪ್ ಸೆಟ್ ತೆರವು ಪರಿಶೀಲನೆ ನಡೆಸಿದರು.

## ಜ್ಞಾನವಾಪಿಯಲ್ಲಿ ಪೂಜೆ ಮುಂದುವರಿಕೆ

### ಪೂಜೆ ವಿರುದ್ಧ ದಾಖಲಾಗಿದ್ದ ಅರ್ಜಿ ಕೋರ್ಟ್‌ನಲ್ಲಿ ರದ್ದು

ಪ್ರಯಾಗ್‌ರಾಜ್, ಫೆ. 26 – ಜ್ಞಾನವಾಪಿ ಸಂಕೀರ್ಣದ ನೆಲಮಾಳಿಗೆ ಯಲ್ಲಿ ಹಿಂದೂ ದೇವರ ಪೂಜೆಗೆ ನೀಡಲಾಗಿರುವ ಅನುಮತಿ ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ತಳ್ಳಿ ಹಾಕಿದೆ.

ಜ್ಞಾನವಾಪಿ ಮಸೀದಿ ವ್ಯವಸ್ಥಾಪಕ ಸಮಿತಿ ದಾಖಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್‌ವಾಲ್ ತಳ್ಳಿ ಹಾಕಿದ್ದಾರೆ. ವಾರಣಾಸಿ ಜಿಲ್ಲಾ ನ್ಯಾಯಾಲಯ ವ್ಯಾಸ ನೆಲಮಾಳಿಗೆ ಯಲ್ಲಿ ಪೂಜೆಗೆ ಅನುಮತಿ ನೀಡಿತ್ತು.

ಇದನ್ನು ಪ್ರಶ್ನಿಸಿ ಅಂಜುಮನ್ ಇಂತೆ ಜಾಮಿಯಾ ಮಸೀದಿ (2ನೇ ಪುಟಕ್ಕೆ)

# ಮೈಲಾರ: 'ಸಂಪಾದಿತಲೇ ಪರಾಕ್'



ಹೂವಿನಹಡಗಲಿ, ಫೆ.26- ನಾಡಿನ ಸುಪ್ರಸಿದ್ಧ ಶ್ರೀ ಮೈಲಾರಲಿಂಗೇಶ್ವರ ಜಾತ್ರಾ, ಕಾರಣಿಕೋತ್ಸವ ಸೋಮವಾರ ಸಂಜೆ ಜರುಗಿತು.

ಡೆಂಕನ ಮರಡಿ ತಲುಪಿ, ಕಾರಣಿಕದ ಮೈದಾನಕ್ಕೆ ಬಂದ ಗೊರವಪ್ಪ, ಸರ ಸರನೆ ಬಿಲ್ಲನ್ನೇರಿ ಸದ್ದಲೇ ಎಂದಾಕ್ಷಣ 'ಸಂಪಾದಿತಲೇ ಪರಾಕ್' ಎಂಬ ಭವಿಷ್ಯ ವಾಣಿ ನುಡಿದರು.

ವಿಶ್ಲೇಷಣೆ; ಪ್ರತಿ ವರ್ಷದ ಪದ್ಧತಿಯಂತೆ ನುಡಿಯುತ್ತಿದ್ದ ಕಾರಣಿಕಕ್ಕೂ ಮತ್ತು ಈ ವರ್ಷ ನುಡಿದ ಕಾರಣಿಕ ಗಮನಿಸಿದ ಭಕ್ತರು ಚಕಿತಗೊಂಡರು.

ಇದೊಂದು ಅಪೂರ್ಣ ಕಾರಣಿಕ. ಏಕೆಂದರೆ, ಇದರಲ್ಲಿ ಯಾವುದೇ ರೀತಿಯ ಕುತೂಹಲವಿಲ್ಲ. ರಾಜ್ಯದಲ್ಲಿ ಮಳೆ, ಬೆಳೆ, ರಾಜಕಾರಣ ಸೇರದಂತೆ ಪ್ರತಿಯೊಂದು ಯೋಜನೆಗಳು ಯಶಸ್ವಿಯಾಗುತ್ತವೆ ಎಂಬ ಸಂಕೇತವನ್ನು ಈ ಭವಿಷ್ಯವಾಣಿ ಸಾದರಪಡಿಸುತ್ತಿದೆ. ರಾಜ್ಯದಲ್ಲಿ ಈಗಾಗಲೇ ಬರಗಾಲ ತಾಂಡವವಾಡುತ್ತಿದ್ದು ಈ ನಡುವೆ ಮೈಲಾರ ಕಾರಣಿಕ ಹೊಸ ಆಶಾಭಾವನೆಯನ್ನು ಮುಂಬರುವ ದಿನಗಳಲ್ಲಿ ಉಂಟು ಮಾಡಲಿದೆ ಎಂದು ಹೇಳಲಾಗುತ್ತಿದೆ.

ದೇವಸ್ಥಾನದಿಂದ ಡೆಂಕನ ಮರಡಿಗೆ ಮೌನ ಸವಾರಿಯಲ್ಲಿ ಅಶ್ವಾರೂಢರಾಗಿ ಧರ್ಮಕರ್ತರಾದ ಶ್ರೀ ಗುರು ವೆಂಕಪ್ಪಯ್ಯ ಒಡೆಯರ್ ಆಗಮಿಸಿದ ನಂತರ ಭಕ್ತರು ಬಿಲ್ಲನ್ನು ಹೊತ್ತು ತಂದರು.

ಈ ವೇಳೆಗಾಗಲೇ ಕಾರಣಿಕದ ಪ್ರಾಂಗಣದಲ್ಲಿ ಧಾರ್ಮಿಕ ಆಚರಣೆ ಪದ್ಧತಿಗಳು ಜರುಗಲಾರಂಭಿಸಿದ್ದವು. ಕಾಗಿನೆಲೆಯ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸೇರಿದಂತೆ, ಇತರೆ ಸ್ವಾಮೀಜಿಗಳು, ಕ್ಷೇತ್ರದ ಶಾಸಕ ಕೃಷ್ಣನಾಯಕ ಮತ್ತಿತರೆ ರಾಜಕೀಯ ಮುಖಂಡರುಗಳು, ಜಿಲ್ಲಾಧಿಕಾರಿ ಎಂ. ಎಸ್. ದಿವಾಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತಿತರೆ ಅಧಿಕಾರಿಗಳು ಹಾಗೂ ಹಿಂದೂ ಧಾರ್ಮಿಕ ದತ್ತಿ ಇಲಾಖೆ ಎ.ಸಿ.ಎಚ್ .ಗಂಗಾಧರ, ಎಂ.ಎಚ್. ಪ್ರಕಾಶ್ ರಾವ್, (ಕಾರವಾರ) ಕಾರ್ಯನಿರ್ವಹಣಾಧಿಕಾರಿ (2ನೇ ಪುಟಕ್ಕೆ)

# ಜಿಲ್ಲೆಯ ಶಾಲೆ, ಅಂಗನವಾಡಿಗಳಿಗೆ ನೀರಿನ ಸಂಪರ್ಕ ಕಡ್ಡಾಯ



### ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಭೆಯಲ್ಲಿ ಜಿ.ಪಂ. ಸಿಇಒ ಸುರೇಶ್ ಇಟ್ನಾಳ್

ದಾವಣಗೆರೆ, ಫೆ. 26 - ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳು ಹಾಗೂ ಅಂಗನವಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೀರಿನ ಸಂಪರ್ಕವನ್ನು ಕಡ್ಡಾಯವಾಗಿ ಕಲ್ಪಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಅಧ್ಯಕ್ಷ ಸುರೇಶ್ ಇಟ್ನಾಳ್ ಸೂಚನೆ ನೀಡಿದರು.

ಅವರು ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೆಲವೊಮ್ಮೆ ಕಲುಷಿತ ನೀರು ಪೂರೈಕೆ ಪ್ರಕರಣಗಳು ಜಿಲ್ಲೆಯಲ್ಲಿ ವರದಿಯಾದ ತಕ್ಷಣವೇ ಆರೋಗ್ಯ ಇಲಾಖೆ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ವಿಭಾಗದ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಕ್ಷಣವೇ ಕ್ರಮ ಕೈಗೊಂಡು ವರದಿ ಮಾಡಬೇಕೆಂದು ಸೂಚನೆ ನೀಡಿದರು.

ಗ್ರಾಮೀಣ ಕುಡಿಯುವ ನೀರಿನ ವಿಭಾಗದಿಂದ ಕೊರೆಯುವ ಕೊಳವೆ ಬಾವಿಗಳನ್ನು ಯಾವ ಯೋಜನೆಯಲ್ಲಿ (4ನೇ ಪುಟಕ್ಕೆ)

# ಬೀದಿ ಬದಿ ವ್ಯಾಪಾರಿಗಳಿಗೆ ಶೀಘ್ರ 'ಮಾರಾಟ ವಲಯ'



ದಾವಣಗೆರೆ, ಫೆ. 26- ಬೀದಿ ಬದಿಯ ವ್ಯಾಪಾರಸ್ಥರಿಗಾಗಿ ನಗರದಲ್ಲಿ ಶೀಘ್ರದಲ್ಲಿಯೇ 'ಮಾರಾಟ ವಲಯ' (ವೆಂಡಿಂಗ್ ಜೋನ್) ನಿರ್ಮಾಣ ಮಾಡಿ ಕೊಡಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ ಹೇಳಿದರು.

ನಗರದ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಬೀದಿ ಬದಿ ಸ್ಥಿರ ಹಾಗೂ ಸಂಚಾರಿ ಚಿಲ್ಲರೆ ವ್ಯಾಪಾರಸ್ಥರ ಕ್ಷೇಮಾಭಿವೃದ್ಧಿ ಸಂಘದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ನಗರದ 5 ಕಡೆಗಳಲ್ಲಿ ಜಾಗ ಗುರುತಿಸಲಾಗಿದ್ದು, ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಮಾರಾಟ ವಲಯ ನಿರ್ಮಾಣವಾದರೆ ವ್ಯಾಪಾರಸ್ಥರಿಗೆ ಅಗತ್ಯವಾಗಿ ಬೇಕಾದ ಬೆಳಕು, ನೆರಳು, ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಹೇಳಿದರು.

ಫುಟ್‌ಪಾತ್ ಅಥವಾ ರಸ್ತೆ ಅಕ್ರಮಿಸದೇ, ಯಾರಿಗೂ ತೊಂದರೆಯಾಗದಂತೆ ವ್ಯಾಪಾರ ಮಾಡಬೇಕು. ಸಮರ್ಪಕವಾಗಿ ಕಸ ವಿಲೇವಾರಿ ಮಾಡಬೇಕು. ಹಂತ ಹಂತವಾಗಿ ಬೀದಿ ಬದಿ ವ್ಯಾಪಾರಸ್ಥರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ರೇಣುಕಾ ತಿಳಿಸಿದರು.

10,500 ಬೀದಿ ಬದಿ ವ್ಯಾಪಾರಸ್ಥರಿಗೆ ತಲಾ ಹತ್ತು ಸಾವಿ ರೂ.ನಂತೆ 1200 ಜನರಿಗೆ 50 ಸಾವಿರ ಹಾಗೂ 150 ಜನರಿಗೆ 1 ಲಕ್ಷ ರೂ. ಸಾಲ ನೀಡಲಾಗಿದೆ. 4000 ಆಶ್ರಯ ಮನೆಗಳು ಮಂಜೂರಾಗಿದ್ದು, ಇವುಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತ ತನಿಖೆ ನಡೆಯುತ್ತಿದ್ದು, ತನಿಖೆ ಪೂರ್ಣಗೊಂಡ ನಂತರ ಅರ್ಹ ಫಲಾನುಭವಿಗಳಿಗೆ ನಿವೇಶನ ನೀಡಲಾಗುವುದು ಎಂದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಭಾರತಿ ಮಾತನಾಡಿ, ಜನಸಂದಣಿ ಇರುವ ಕಡೆ ಮಾರಾಟ ವಲಯ ನಿರ್ಮಾಣ ಮಾಡಬೇಕು. ಅನರ್ಹರಿಗೆ ಗುರುತಿನ ಚೀಟಿ ನೀಡಿರುವುದರ ಬಗ್ಗೆ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

ಮಹಾನಗರ ಪಾಲಿಕೆ ಬಿಜೆಪಿ ಸದಸ್ಯ ಆರ್.ಎಲ್. ಶಿವಪ್ರಕಾಶ್ ಮಾತನಾಡಿ, ಮಹಾನಗರ ಪಾಲಿಕೆಯಿಂದ ಅರ್ಹರಿಗೆ ಆಶ್ರಯ ಮನೆಗಳು ಸಿಗುತ್ತಿಲ್ಲ. ಲಕ್ಷ ಲಕ್ಷ ಹಣ ಕೊಟ್ಟವರಿಗೆ ಸಿಗುತ್ತಿವೆ. ಆದ್ದರಿಂದ ಬೀದಿ ಬದಿಯ ವ್ಯಾಪಾರಸ್ಥರು ಸಚಿವರು, ಶಾಸಕರ ಮನೆಗಳಿಗೆ ಹೋಗಿ ಘೇರಾವ್ ಹಾಕಿ ಒತ್ತಾಯಿಸಬೇಕೆಂದರು.

ವ್ಯಾಪಾರ ಸ್ಥಳ ಗುರುತಿಸಿ ಕೊಡುವವರೆಗೂ ಜಕಾತಿ ಕೊಡಬೇಡಿ ಎಂದು ಹೇಳಿದರು.

ಸಂಘದ ಅಧ್ಯಕ್ಷ ಎಸ್. ಇಸ್ಮಾಯಿಲ್ ಅಧ್ಯಕ್ಷತೆ ವಹಿಸಿದ್ದರು. ಮಹಾನಗರ ಪಾಲಿಕೆ ಮಹಾಪೌರರಾದ ವಿನಾಯಕ ಪೈಲ್ವಾನ್, ನಿವೃತ್ತ ನ್ಯಾಯಾಧೀಶ ಈಶ್ವರಪ್ಪ ಜಂತಲಿ, ಸಂಘದ ಪದಾಧಿಕಾರಿಗಳಾದ ಮಂಜುನಾಥ್ ಕೈದಾಳೆ, ಎಸ್.ಕೆ. ರಹಮತ್ ವುಲ್ಲಾ, ಎಸ್. ದುಗ್ಗಪ್ಪ, ಹೆಚ್.ಸಿ. ಮಲ್ಲಪ್ಪ, ಪೂಜಾ ಸೇರಿದಂತೆ ಅನೇಕರಿದ್ದರು.

ಕೈಲಾಸ ಶಿವಗಣಾರಾಧನೆ ಆಹ್ವಾನ



ಶರಣ ಡಾ|| ಜಿ. ಶಿವಪ್ರಕಾಶ್‌ರವರು
ಮಾಜಿ ವಕ್ರದಂತ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರು, ಕಾಲೇಜ್ ಆಫ್ ಡೆಂಟಲ್ ಸೈನ್ಸಸ್, ದಾವಣಗೆರೆ.
(ಜನನ : 18.08. 1964 - ನಿಧನ : 20.02.2024)

ಡಾ|| ಜಿ. ಗುರುಪ್ರಸಾದ್, ನವಜಾತ ಶಿಶು ತಜ್ಞರು, ದಾವಣಗೆರೆ.,
ಇವರು ಮಾಡುವ ವಿಜ್ಞಾಪನೆಗಳು
ನನ್ನ ಸಹೋದರನಾದ
ಶರಣ ಡಾ|| ಜಿ. ಶಿವಪ್ರಕಾಶ್‌ರವರು
(ಶರಣೆ ಲಿಂ|| ಶ್ರೀಮತಿ ಡಿ.ಜಿ. ಚನ್ನಮ್ಮ, ಶರಣ ಲಿಂ|| ಜಿ. ಜಯದೇವಪ್ಪ ಇವರ ದ್ವಿತೀಯ ಪುತ್ರ)
ದಿನಾಂಕ : 20.02.2024ನೇ ಮಂಗಳವಾರ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಲಿಂಗೈಕ್ಯರ ಆತ್ಮಶಾಂತಿಗಾಗಿ ತತ್ಸಂಬಂಧವಾದ
"ಕೈಲಾಸ ಶಿವಗಣಾರಾಧನೆ "ಯನ್ನು
ದಿನಾಂಕ : 28.02.2024ನೇ ಬುಧವಾರ ಮಧ್ಯಾಹ್ನ 12.00 ಗಂಟೆಯಿಂದ ಐ.ಎಂ.ಎ. ಹಾಲ್, ಎಂ.ಸಿ.ಸಿ. 'ಬಿ' ಬ್ಲಾಕ್, ಸ್ವಿಮ್ಮಿಂಗ್ ಪೂಲ್ ಹತ್ತಿರ, ದಾವಣಗೆರೆ, ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ದಯಮಾಡಿ ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು :
ಶ್ರೀಮತಿ ಡಾ|| ಸರ್ವಮಂಗಳ, ಡಾ|| ಗುರುಪ್ರಸಾದ್
ಮೃತರ ಧರ್ಮಪತ್ನಿ : ಶ್ರೀಮತಿ ಡಾ|| ವೀಣಾ ಪ್ರಕಾಶ್,
ಶ್ರೀಮತಿ ಡಾ|| ವರ್ಷಿತ, ಡಾ|| ನಿಶ್ಚಲ್ ಮತ್ತು ಕು|| ಸಿರಿ.
ಶ್ರೀಮತಿ ನಿರ್ಮಲ ಹಾಗೂ ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

## ಸಂಕ್ಷಿಪ್ತ ಸುದ್ದಿ

**ಭಾರತದ ವೇಗದ ಬೆಳವಣಿಗೆ ಈಗ ವಿಶ್ವಕ್ಕೆ ಸಾಮಾನ್ಯ : ಮೋದಿ**
ನವದೆಹಲಿ : ಭಾರತದ ವೇಗದ ಬೆಳವಣಿಗೆ ವಿಶ್ವಕ್ಕೆ ಈಗ ಅಚ್ಚರಿಯ ವಿಷಯವಾಗಿ ಉಳಿದಿಲ್ಲ. ವೇಗದ ಬೆಳವಣಿಗೆ ಈಗ ಭಾರತಕ್ಕೆ ಸಾಮಾನ್ಯವಾಗಿದೆ. ಭಾರತದ ಜೊತೆಗೆ ಕಾರ್ಯನಿರ್ವಹಿಸುವುದರಿಂದ ಆಗುವ ಬೆಳವಣಿಗೆ ಬಗ್ಗೆ ವಿಶ್ವಕ್ಕೆ ತಿಳಿದಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**ವಿಶ್ವ ಆರೋಗ್ಯ ಸಂಘಟನೆಯಿಂದ ಹೊರ ಬರುವಂತೆ ರೈತರ ಪ್ರತಿಭಟನೆ**
ನವದೆಹಲಿ : ವಿಶ್ವ ಆರೋಗ್ಯ ಸಂಘಟನೆಯ ಒಪ್ಪಂದದಿಂದ ಭಾರತ ಹೊರ ಬರಬೇಕೆಂದು ಆಗ್ರಹಿಸಿ ಪಂಜಾಬ್, ಹರಿಯಾಣ ಹಾಗೂ ಉತ್ತರ ಪ್ರದೇಶದ ಹಲವೆಡೆ ರೈತರು ಟ್ರ್ಯಾಕ್ಟರ್ ಮೆರವಣಿಗೆ ಮೂಲಕ ಪ್ರತಿಭಟನೆ ನಡೆಸಿದ್ದಾರೆ.

**ರಷ್ಯಾ ಸೈನ್ಯದಿಂದ ಭಾರತೀಯ ಸಹಾಯಕರ ಬಿಡುಗಡೆ**
ನವದೆಹಲಿ : ಭಾರತದ ಬೇಡಿಕೆಯ ಮೇಲೆ ರಷ್ಯಾ ಸೈನ್ಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಹಲವು ಭಾರತೀಯರನ್ನು ಬಿಡುಗಡೆ ಮಾಡಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

**ಮೋದಿ ಗ್ಯಾರಂಟಿಯ ವಿಡಿಯೋ ವ್ಯಾನ್‌ಗಳಿಗೆ ಹಸಿರು ನಿಶಾನೆ**
ನವದೆಹಲಿ : ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು 'ವಿಕಸಿತ ಭಾರತ ಮೋದಿ ಕಿ ಗ್ಯಾರಂಟಿ' ವಿಡಿಯೋ ವ್ಯಾನ್‌ಗೆ ಹಸಿರು ನಿಶಾನೆ ತೋರಿದ್ದಾರೆ. ಈ ವ್ಯಾನ್‌ಗಳು ದೇಶಾದ್ಯಂತ ಸಂಚರಿಸಲಿವೆ. ಈ ವ್ಯಾನ್‌ಗಳು ಜನಾಭಿಪ್ರಾಯ ಸಂಗ್ರಹಿಸಲಿದ್ದು, ಅದರ ಆಧಾರದ ಮೇಲೆ ಬಿಜೆಪಿ ಲೋಕಸಭಾ ಚುನಾವಣೆಗೆ ಪ್ರಣಾಳಿಕೆ ರೂಪಿಸಲಿದೆ.

**ಏಳನೇ ಸಮನ್ಸ್‌ಗೂ ಕೇಜ್ರಿವಾಲ್ ಗೈರು**
ನವದೆಹಲಿ : ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಕಳಿಸಿದ್ದ ಏಳನೇ ಸಮನ್ಸ್‌ಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗೈರಾಗಿದ್ದಾರೆ. ನ್ಯಾಯಾಲಯ ಆದೇಶ ನೀಡಿದರೆ ಜಾರಿ ನಿರ್ದೇಶನಾಲಯದ ಎದುರು ಹಾಜರಾಗುವುದಾಗಿ ಕೇಜ್ರಿವಾಲ್ ಹೇಳಿದ್ದಾರೆ.

**ಬಿಜೆಪಿ ವಿರುದ್ಧದ ಟ್ವೀಟ್ ತಪ್ಪಾಗಿದೆ ಎಂದ ಕೇಜ್ರಿವಾಲ್**
ನವದೆಹಲಿ : ಬಿಜೆಪಿಯ ಐ.ಟಿ. ವಿಭಾಗಕ್ಕೆ ಸಂಬಂಧಿಸಿದಂತೆ ಯೂಟ್ಯೂಬರ್ ಧ್ರುವ ರಾಠಿ ರೂಪಿಸಿದ್ದ ವಿಡಿಯೋ ಅನ್ನು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಪ್ಪಿನಿಂದಾಗಿ ರೀಟ್ವೀಟ್ ಮಾಡಿದ್ದರು ಎಂದು ಸುಪ್ರೀಂ ಕೋರ್ಟ್ ಎದುರು ಸ್ಪಷ್ಟನೆ ನೀಡಲಾಗಿದೆ. ಕೇಜ್ರಿವಾಲ್ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸಲಾಗಿತ್ತು. ಇದರ ವಿಚಾರಣೆ ವೇಳೆ ಕೇಜ್ರಿವಾಲ್ ಈ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾರೆ.

# ಇಂದು ರಾಜ್ಯಸಭಾ ಚುನಾವಣೆ : ಅಡ್ಡ ಮತದಾನದ ಭೀತಿ

ಬೆಂಗಳೂರು, ಫೆ. 26 - ಅಡ್ಡ ಮತದಾನದ ಭೀತಿ ನಡುವೆಯೇ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಾಳೆ ಮತದಾನ ನಡೆಯಲಿದೆ.

ನಾಲ್ಕು ಸ್ಥಾನಗಳ ಆಯ್ಕೆಗೆ ಐವರು ಅಭ್ಯರ್ಥಿಗಳು ಕಣಕ್ಕಿಳಿದಿರುವುದು ಆಡಳಿತಾರೂಢ ಕಾಂಗ್ರೆಸ್ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್‌ಗೂ ತಳಮಳ ಉಂಟಾಗಿದೆ.

ಕಾಂಗ್ರೆಸ್‌ನ ರಾಜಾ ವೆಂಕಟಪ್ಪ ನಾಯಕ್ ಅವರ ಹಠಾತ್ ನಿಧನದಿಂದ ಕಾಂಗ್ರೆಸ್‌ಗೆ ಸ್ವಲ್ಪ ಪೆಟ್ಟು ಬಿದ್ದಿದೆ. ರಾಜ್ಯಸಭೆ ಪ್ರವೇಶಿಸಲು ವಿಧಾನಸಭೆಯಲ್ಲಿ ಪ್ರಸ್ತುತ ಬಲಾಬಲದ ಆಧಾರದ ಮೇಲೆ ಒಬ್ಬ ಅಭ್ಯರ್ಥಿ ಗೆಲುವಿಗೆ ಕನಿಷ್ಠ 44.65 ಮತಗಳ ಅಗತ್ಯವಿದೆ.

ಕಣದಲ್ಲಿರುವ ಐದು ಅಭ್ಯರ್ಥಿಗಳು ಸಹ ಆಯಾ ಪಕ್ಷದ ಅಧಿಕೃತ ಅಭ್ಯರ್ಥಿಗಳಾಗಿರುವುದರಿಂದ ಯಾರು ಮೊದಲು ಕನಿಷ್ಠ 44.65 ಮತಗಳ ಗೆಲುವಿನ ಗುರಿ ಮುಟ್ಟುತ್ತಾರೋ ಅವರು ಜಯಶೀಲರಾಗುತ್ತಾರೆ.

ಕಡೇ ಘಳಿಗೆಯಲ್ಲಿ ಕಾಂಗ್ರೆಸ್‌ಗೆ ಒಂದು ಮತ ಕಡಿಮೆಯಾಗಿರುವುದರಿಂದ ನಾಲ್ವರು ಪಕ್ಷೇತರರಿಗೆ ಬೇಡಿಕೆ ಹೆಚ್ಚಾಗಿದೆ. ಅವರಲ್ಲಿ ಬಹುತೇಕರು ಆಡಳಿತ ಪಕ್ಷದ ಕಡೆ ಒಲವು ತೋರಿದ್ದರೂ ಕಾಂಗ್ರೆಸ್‌ಗೆ ಭಯ ದೂರವಾಗಿಲ್ಲ. ಈ ಕಾರಣಕ್ಕಾಗಿಯೇ ತಮ್ಮ ಎಲ್ಲಾ ಶಾಸಕರನ್ನು ಪಂಚತಾರಾ ಹೋಟೆಲ್‌ನಲ್ಲಿ ಹಿಡಿದಿಟ್ಟುಕೊಂಡಿದ್ದು, ಅಲ್ಲಿಯೇ ತಮ್ಮ ಅಭ್ಯರ್ಥಿಗಳಿಗೆ ಯಾವ ರೀತಿ ಮತ ಚಲಾಯಿಸಬೇಕು ಎಂಬ ಬಗ್ಗೆ ತರಬೇತಿ ನೀಡಿ, ನಾಳೆ ಬೆಳಗ್ಗೆ ಹೋಟೆಲ್‌ನಿಂದ ನೇರವಾಗಿ ವಿಧಾನಸೌಧಕ್ಕೆ ಕರೆ ತರಲಿದ್ದಾರೆ.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಏಕೈಕ ಶಾಸಕ ಜಿ.ಜನಾರ್ದನ ರೆಡ್ಡಿ ಎನ್‌ಡಿಎ ಕಡೆ ಗುರುತಿಸಿಕೊಂಡಿದ್ದರೂ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು, ತಮ್ಮ ಸ್ನೇಹದ ಪ್ರಭಾವ ಬೆಳೆಸಿ ಅವರನ್ನು ರಾತ್ರೋರಾತ್ರಿ ತಮ್ಮ ಕಡೆ ಒಲಿಸಿಕೊಂಡಿದ್ದಾರೆ.

ಅಷ್ಟೇ ಅಲ್ಲ, ಗಣಿ ಹಗರಣದ ವಿರುದ್ಧ ಹೋರಾಟ ನಡೆಸಿ, ಯಾರನ್ನು ವಿರೋಧ ಮಾಡಿದ್ದರೋ, ಅದೇ ಜನಾರ್ದನ ರೆಡ್ಡಿ ಅವರನ್ನು ಅದೇ ಸಿದ್ದರಾಮಯ್ಯ ಇಂದು ಅಪ್ಪಿಕೊಂಡಿದ್ದಾರೆ.

ಆಡಳಿತಾರೂಢ ಪಕ್ಷ ತನಗೆ ಬಹುಮತವಿದ್ದರೂ, ಮೂವರು ಅಭ್ಯರ್ಥಿಗಳ ಗೆಲುವಿಗೆ ನಡೆಸುತ್ತಿರುವ ರಾಜಕೀಯ ತಂತ್ರಗಾರಿಕೆ ನಡುವೆಯೂ ಬಿಜೆಪಿ-ಜೆಡಿಎಸ್ ತನ್ನ ಎರಡನೇ ಅಭ್ಯರ್ಥಿಯ ಗೆಲುವಿಗಾಗಿ ಕಸರತ್ತು ಮುಂದುವರೆಸಿವೆ.

ಮಾಜಿ ಮುಖ್ಯಮಂತ್ರಿ ಜೆಡಿಎಸ್‌ನ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿಯ ಬಿ. ಎಸ್.ಯಡಿಯೂರಪ್ಪ ಅವರ ಸಮ್ಮುಖದಲ್ಲಿ ಉಭಯ ಪಕ್ಷಗಳ ಮುಖಂಡರು ಸಭೆ ನಡೆಸಿ ತಮ್ಮ ಮತಗಳನ್ನು ಹಿಡಿದಿಟ್ಟುಕೊಳ್ಳುವುದರ ಜೊತೆಗೆ ತಮ್ಮದಲ್ಲದ ಮತಗಳನ್ನು ಪಡೆಯಲು ನಾಲ್ಕು ಗೋಡೆಗಳ ನಡುವೆ ತಂತ್ರಗಾರಿಕೆ ನಡೆಸಿದ್ದಾರೆ. ಅಲ್ಲದೇ, ಉಭಯ ಪಕ್ಷಗಳು ಪ್ರತ್ಯೇಕವಾಗಿ ಶಾಸಕಾಂಗ ಪಕ್ಷದ ಸಭೆಗಳನ್ನು ನಡೆಸಿ, ತಮ್ಮ ಶಾಸಕರನ್ನು ಹಿಡಿದಿಟ್ಟುಕೊಳ್ಳುವ ಕೆಲಸ ಮಾಡಿದ್ದಾರೆ. ಅಲ್ಲಿಯೇ ತಮ್ಮವರಿಗೂ ಮತದಾನ ಮಾಡುವ ಪಾಠ ಮಾಡಿದ್ದಾರೆ.

ಮೂರೂ ಪಕ್ಷಗಳು ತಮ್ಮ ಶಾಸಕರಿಗೆ ವಿಪ್ ಜಾರಿಗೊಳಿಸಿರುವುದಲ್ಲದೆ, ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಪಂಚತಾರಾ ಹೋಟೆಲ್‌ಗೆ ತೆರಳಿದ್ದಾರೆ.

ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಕಾಂಗ್ರೆಸ್ ಮೂರು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದೆ. ಬಿಜೆಪಿ ತನಗಿರುವ ಸಂಖ್ಯಾಬಲದ ಮೇಲೆ ತನ್ನ ಅಧಿಕೃತ ಅಭ್ಯರ್ಥಿ ಗೆಲ್ಲಿಸಿಕೊಂಡು ಹೆಚ್ಚುವರಿಯಾಗಿರುವ 21 ಮತಗಳನ್ನು ಎನ್‌ಡಿಎ ಮೈತ್ರಿಕೂಟದ ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿಗೆ ನೀಡಲಿದೆ.

ಜೆಡಿಎಸ್ ವಿಧಾನಸಭೆಯಲ್ಲಿ ಕೇವಲ 19 ಶಾಸಕರನ್ನು ಮಾತ್ರ ಹೊಂದಿದ್ದರೂ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಹೆಚ್ಚುವರಿಯಾಗಿರುವ ಬಿಜೆಪಿ, ಪಕ್ಷೇತರ ಶಾಸಕರ ಬೆಂಬಲ ಒಳಗೊಂಡಂತೆ ತನ್ನ ಅಭ್ಯರ್ಥಿ ಗೆಲುವಿಗೆ ಇಂದು ಇಡೀ ದಿನ ಅಳೆದು ತೂಗಿ ನೋಡಿದರು.

ರಾಜ್ಯಸಭೆಯ ಚುನಾವಣೆಯಲ್ಲಿ ಪ್ರಾಶಸ್ತ್ಯದ ಮತದಾನ ಮಾಡಬೇಕು. ಮತ ಪತ್ರದಲ್ಲಿ ಅಂಕಿಯಲ್ಲಿ 1, 2 ಎಂದು ನಮೂದಿಸುವ ಮೂಲಕ ಪ್ರಾಶಸ್ತ್ಯ ಕ್ರಮದಲ್ಲಿ ಮತ ಚಲಾಯಿಸಬೇಕು. ಅಕ್ಷರಗಳಲ್ಲಿ ನಮೂದಿಸಿ ಮತದಾನ ಮಾಡಿದರೂ, ಆಯಾ ಪಕ್ಷದ ಚುನಾವಣಾ ಏಜೆಂಟ್‌ಗೆ ತೋರಿಸಬೇಕು. ಬೇರೆ ಯಾರಿಗೂ ತೋರಿಸುವಂತಿಲ್ಲ.

ಒಂದು ವೇಳೆ ಆಯಾ ಪಕ್ಷದ ಚುನಾವಣಾ ಏಜೆಂಟರನ್ನು ಹೊರತುಪಡಿಸಿ ಬೇರೆ ಯಾರಿಗೇ ತೋರಿಸಿದರೂ ಆ ಮತ ಅಸಿಂಧುವಾಗಲಿದೆ. ಆಯಾ ಅಭ್ಯರ್ಥಿಗೆ ಮತವನ್ನು ಸರಿಯಾಗಿ ಚಲಾಯಿಸಬೇಕು. ಇಬ್ಬರು ಅಭ್ಯರ್ಥಿಗಳ ಹೆಸರಿನ ನಡುವಿನ ಗೆರೆ ದಾಟಿದರೂ ಅಸಿಂಧುವಾಗಲಿದೆ. ಹೀಗಾಗಿ ರಾಜಕೀಯ ಪಕ್ಷಗಳು ಮತದಾನ ಮಾಡುವ ಬಗ್ಗೆ ಶಾಸಕರಿಗೆ ತರಬೇತಿಯನ್ನು ನೀಡಿವೆ.

ಪಕ್ಷೇತರ ಅಭ್ಯರ್ಥಿಗಳು ಮತದಾನ ಮಾಡಿದ ಮತ ಪತ್ರ ಯಾರಿಗೂ ತೋರಿಸಬೇಕಿಲ್ಲ. ಒಂದು ವೇಳೆ ತೋರಿಸಿದರೆ ಆ ಮತ ಅಸಿಂಧುವಾಗಲಿದೆ.

ವಿಧಾನಸಭೆಯ 223 ಶಾಸಕರು ಮತದಾನ ಮಾಡುವ ಹಕ್ಕು ಪಡೆದಿದ್ದಾರೆ. ವಿಧಾನಸೌಧದಲ್ಲಿ ಬೆಳಗ್ಗೆ 9 ಗಂಟೆಯಿಂದ ಸಂಜೆ ನಾಲ್ಕು ಗಂಟೆಯವರೆಗೆ ಮತದಾನ ನಡೆಯಲಿದೆ. ಐದು ಗಂಟೆ ಬಳಿಕ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

ಮತದಾನ ಕೇಂದ್ರವು ಭಾರತ ಚುನಾವಣಾ ಆಯೋಗದ ವೆಬ್‌ಕಾಸ್ಟ್‌ಗೆ ಒಳಪಟ್ಟಿರುತ್ತದೆ. ಅಲ್ಲದೆ, ಸಿಸಿ ಕ್ಯಾಮೆರಾದ ನಿಗಾವಣೆಯಲ್ಲಿರುತ್ತದೆ.

## ಸಮುದಾಯದ ಜತೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕು



### ಶಿಕ್ಷಕರಿಗೆ ಬಿಇಓ ಹನುಮಂತಪ್ಪ ಕಿವಿ ಮಾತು

ಮಲೇಬೆನ್ನೂರು, ಫೆ. 26 - ಶಿಕ್ಷಕರೇ ಪ್ರಶ್ನೆ ಪತ್ರಿಕೆ ಸಿದ್ದಪಡಿಸಿ ಪೂರ್ವ ಸಿದ್ದತಾ ಪರೀಕ್ಷೆ ನಡೆಸಿರಿ, 5, 8, 9ನೇ ತಗರತಿಯ ಮಕ್ಕಳ ಸಾಮರ್ಥ್ಯ ಆಧಾರಿತ ಕಲಿಕೆಯ ಮೌಲ್ಯಾಂಕನವು ವಿದ್ಯಾರ್ಥಿಗಳ ಜ್ಞಾನ ಹೆಚ್ಚಿಸಲು ಅನುಕೂಲವಾಗಿದ್ದು ಜೊತೆಗೆ ಭವಿಷ್ಯದ ಸ್ಪರ್ಧಾ ಜಗತ್ತಿಗೆ ಅಣಿಗೊಳಿಸಲು ಪೂರಕವಾಗಿದೆ ಎಂದು ಬಿಇಓ ಹನುಮಂತಪ್ಪ ಹೇಳಿದರು.

ಅವರು ಶುಕ್ರವಾರ ಧೂಳೆಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಗುತ್ತೂರು, ಭಾನುವಳ್ಳಿ ಮತ್ತು ಹೊಳೆಸಿರಿಗೆರೆ ಸಮೂಹ ಸಂಪನ್ಮೂಲ ವ್ಯಾಪ್ತಿಯ ಶಿಕ್ಷಕರ ಗಣಿತ, ವಿಜ್ಞಾನ ಮತ್ತು ಸಮಾಜ ವಿಷಯಗಳ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರ್ಕಾರಿ ಶಾಲೆಗಳು ಕ್ಷೀಣಿಸುವ ಹಂತ ತಲುಪಿವೆ, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಸರಳ ತರಗತಿ ತೆಗೆದುಕೊಳ್ಳದೇ ಐದು, ಆರು, ಏಳನೇ ತರಗತಿ ತೆಗೆದುಕೊಂಡು ಸಾಧನೆ ಮಾಡುವ ರೀತಿಯಲ್ಲಿ ಪಾಠ ಹೇಳಿಕೊಡಿ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚು ದಾಖಲಾಗಲು ಪೋಷಕರ ಮನೆಗೆ ಭೇಟಿ ಕೊಡಿ ಎಂದು ಸಲಹೆ ನೀಡಿದರು.

ಒಂದನೇ ತರಗತಿ ಆಂಗ್ಲ ಮಾಧ್ಯಮ ಹಾಗೂ ಎಂಟನೇ ತರಗತಿ ಆರಂಭಿಸಲು ಕೊಠಡಿಗಳು ಹಾಗೂ ಸ್ಥಳಿಯ ಸಂಪನ್ಮೂಲ ಬಳಸಿಕೊಳ್ಳಿ ಮತ್ತು ಈ ಬಗ್ಗೆ ಎಸ್‌ಡಿಎಂಸಿ ಸಭೆಯಲ್ಲಿ ಚರ್ಚಿಸಿ ಎಂದು ತಿಳಿಸಿದರು.

ಆರು ವರ್ಷಗಳಿಂದ ಸ್ಥಗಿತಗೊಂಡ ಶಿಕ್ಷಕರ ಸೇವಾ ಪುಸ್ತಕಗಳ ಸಮಸ್ಯೆಯನ್ನು ಗುರುಸ್ಪಂದನ ಮೂಲಕ ಬಗೆಹರಿಸಲಾಗಿದೆ. ಗಳಿಕೆ ರಜೆಗಳನ್ನು ಬಳಸಿಕೊಳ್ಳಿ ಹಾಗೂ ಚುನಾವಣಾ ಕಾರ್ಯದಲ್ಲಿ ಮತಗಟ್ಟೆ ಅಧಿಕಾರಿಯಾದವರು ಅಲ್ಲಿಯ ಗೌರವ ಧನವನ್ನು ತೆಗೆದುಕೊಂಡರೆ ಇತರೆ ಸೌಲಭ್ಯ ದೊರಕುವುದಿಲ್ಲ ಎಂದು ಹೇಳಿದರು.

ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಸಿ. ಹಿರೇಮಠ್, ಗಿರೀಶ್, ಕೆ.ಎಚ್.ತೀರ್ಥಪ್ಪ, ಮುಖ್ಯ ಶಿಕ್ಷಕ ಶರಣ್‌ಕುಮಾರ್ ಹೆಗಡೆ, ಸಿಆರ್‌ಪಿ ಪ್ರಕಾಶ್, ಮಲ್ಲೇಶಪ್ಪ, ಕೊಟ್ರಯ್ಯ, ರುದ್ರಪ್ಪ, ಗದಿಗೆಪ್ಪ ಹಳೆಮನೆ, ಕುಬೇರಪ್ಪ, ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕ ಮುದ್ದೇರ ಹನುಮಂತಪ್ಪ, ಸಂಪನ್ಮೂಲ ವ್ಯಕ್ತಿ ನೀಲನಗೌಡ ಗಣಿತ ವಿಷಯ ಕುರಿತು ಮಾಹಿತಿ ಹಂಚಿಕೊಂಡರು.

## ತಾಂಡಾಗಳಲ್ಲೇ ರಂಗಭೂಮಿ ಕಲೆ ಜೀವಂತ, ಹೆಮ್ಮೆಯ ಸಂಗತಿ

### ಬಯಲು ನಾಟಕ ಉದ್ಘಾಟನಾ ಸಂದರ್ಭದಲ್ಲಿ ರೈತ ಮುಖಂಡ ರವೀಂದ್ರಗೌಡ ಎಫ್.ಪಾಟೀಲ



ರಾಣೇಬೆನ್ನೂರು, ಫೆ. 26- ಟಿ.ವಿ., ಸಿನಿಮಾ, ಮೊಬೈಲ್ ಗೀಳಿನ ಮಧ್ಯೆಯೂ ತಾಂಡಾಗಳಲ್ಲೇ ರಂಗಭೂಮಿಯ ಕಲೆ ಜೀವಂತವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ರೈತ ಮುಖಂಡ, ಪ್ರಗತಿಪರ ಚಿಂತಕ ರವೀಂದ್ರಗೌಡ ಎಫ್. ಪಾಟೀಲ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಚೆನ್ನಾಪುರ ತಾಂಡಾದಲ್ಲಿ ಹಿರೇಕೆರೂರು ದುರ್ಗಾದೇವಿ ಜಾತ್ರಾ ನಿಮಿತ್ತ ಸ್ಥಳೀಯ ಸೇವಾಲಾಲ್ ಕಲಾ ನಾಟ್ಯ ಸಂಘದ ಯುವಕರು ಜಾತ್ರಾ ನಿಮಿತ್ಯವಾಗಿ ಹಮ್ಮಿಕೊಂಡಿದ್ದ 'ಬಡವ ಬದಲಾಗಲೇಬೇಕು'ಎಂಬ ಸುಂದರ ಸಾಮಾಜಿಕ ಬಯಲು ನಾಟಕ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಅತ್ಯಂತ ಕಡು ಬಡತನದಲ್ಲಿದ್ದ ಈ ಹಿಂದಿನ ತಾಂಡಾಗಳಲ್ಲಿನ ಲಂಬಾಣಿ ಜನಾಂಗದವರ ಬದುಕನ್ನು ಈಗಿನ ಅವರ ಪೀಳಿಗೆಯ ವಿದ್ಯಾವಂತ ಮಕ್ಕಳು ಶಿಕ್ಷಣ ಪಡೆಯುವ ಮೂಲಕ ಬಡತನವನ್ನು ಹೊರದಬ್ಬಿದ್ದಾರೆ. ಜೊತೆಗೆ ಸಂಸ್ಕಾರ, ಸಂಪ್ರದಾಯಗಳಲ್ಲಿ ಲಂಬಾಣಿ ಜನಾಂಗದವರನ್ನು ಮೀರಿಸುವವರು ಯಾರೂ ಇಲ್ಲದಂತಾಗಿದೆ ಎಂದರು.

ಅವರ ಆಚಾರ, ವಿಚಾರಗಳೇ ಇಡೀ ಜಗತ್ತಿಗೆ ಮಾದರಿಯಾಗಿವೆ. 'ತಾಂಡಾ' ನಿವಾಸಿಗಳ ಬದುಕು ಈ ಹಿಂದೆ ಎಷ್ಟೊಂದು ಕಷ್ಟಮಯವಾಗಿತ್ತು ಎನ್ನುವುದನ್ನು ನೆನೆಸಿಕೊಂಡರೆ ಮೈ ಜುಮ್ಮೆನ್ನುತ್ತದೆ. ಅಂಥ ಕಷ್ಟದ ಬದುಕನ್ನು ಕಟ್ಟಿಕೊಂಡು ತಾಂಡಾ ನಿವಾಸಿಗಳು ಇಂದಿನವರೆಗೂ ತಮ್ಮ ಆಚರಣೆಯ ವಿಶೇಷ ಹಬ್ಬ ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ರಂಗಭೂಮಿಗೆ ಹೆಚ್ಚು ಒತ್ತನ್ನು ಕೊಡುತ್ತಿದ್ದಾರೆ ಎಂದು ಹೇಳಿದರು.

ಇಂಥ ಆಧುನಿಕ ಜಗತ್ತಿನಲ್ಲಿಯೂ ಕೂಡ ತಾಂಡಾಗಳಲ್ಲೇ ಅತೀ ಹೆಚ್ಚು ರಂಗಭೂಮಿ ಕಲೆ ಉಳಿದಿರುವುದು ನಮಗೆ ಹೆಮ್ಮೆ ಎನಿಸುತ್ತದೆ. ಅಷ್ಟೇ ಅಲ್ಲ ಇಂದಿನ ಬಂಜಾರ ಸಮಾಜದ ಯುವಕರು ತಮ್ಮ ಹಿರಿಯರ ಕಲೆ, ಆಚಾರ, ವಿಚಾರ, ಸಂಪ್ರದಾಯಗಳನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಅಧ್ಯಕ್ಷತೆಯನ್ನು ಗ್ರಾ.ಪಂ. ಉಪಾಧ್ಯಕ್ಷೆ ಶಿಲ್ಪಾ ನಾಯ್ಕ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಕ್ರೆಪ್ಪ ಲಮಾಣಿ, ಬೀರಪ್ಪ ಲಮಾಣಿ, ರಮೇಶ ಲಮಾಣಿ, ವಸಂತ ನಾಯ್ಕ, ಹನುಮಂತಪ್ಪ ದುರ್ಗದ, ತಿಪ್ಪೇಶ ಲಮಾಣಿ, ಗುರಪ್ಪ ಅಂಬ್ಲಿ, ಲಕ್ಷ್ಮಣ ನಾಯಯ್ಕ, ಚಂದ್ರಾ ನಾಯ್ಕ ಮುಂತಾದವರು ಭಾಗವಹಿಸಿದ್ದರು.

## ಆರೋಗ್ಯದ ಬಗ್ಗೆ ಗಮನಿಸುವಂತೆ ಡಾ. ಪ್ರಭಾ ಮಲ್ಲಿಕಾರ್ಜುನ್ ಸಲಹೆ



ದಾವಣಗೆರೆ, ಫೆ. 26 - ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನ ಬಾಪೂಜಿ ಶಾಲೆಯಲ್ಲಿ ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಎಸ್.ಎಸ್. ಕೇರ್ ಟ್ರಸ್ಟ್‌ನ ಸದಸ್ಯೆ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್ ನೆರೆದಿದ್ದ ಸಾರ್ವಜನಿಕರಿಗೆ ತಮ್ಮ ಆರೋಗ್ಯದ ಬಗ್ಗೆ ಗಮನಿಸುವಂತೆ ಅರಿವು ಮೂಡಿಸಿದರು. ಶಿಬಿರದ ಪ್ರಯೋಜನಗಳನು ಸದುಪಯೋಗ ಪಡಿಸಿಕೊಳ್ಳಲು ಸೂಚಿಸಿದರು.

ಈ ಸಂದರ್ಭದಲ್ಲಿ ವಾರ್ಡಿನ ಮಾಜಿ ಮಹಾನಗರ ಪಾಲಿಕೆ ಸದಸ್ಯರಾದ ಜಿ.ಬಿ. ಲಿಂಗರಾಜ್, ಕಾಂಗ್ರೆಸ್ ವಕ್ತಾರ ಟಿ. ಬಸವರಾಜ್, ಮಾಜಿ ನಗರಸಭೆ ಸದಸ್ಯೆ ಶ್ರೀಮತಿ ಬಿ.ವಿ. ವಿಜಯ ಲಿಂಗರಾಜು, ನವೀನ್, ಎಸ್‌ಎಂಎಸ್ ರಾಜು, ಬೇತೂರು ನರೇಂದ್ರ, ಯಶೋಧಮ್ಮ, ಕಸ್ತೂರಬಾ ಸುರೇಬಾನು, ಜಿ.ಎಲ್. ಸುಹಾಸ್, ಎಂ.ಜಿ. ಮಂಜು, ಬಸಾಪುರ ಹರೀಶ್ ಮತ್ತು ವಾರ್ಡಿನ ಸಾರ್ವಜನಿಕರು ಉಪಸ್ಥಿತರಿದ್ದರು.

## ರಾಮಗಿರಿ ರೈಲ್ವೆ ನಿಲ್ದಾಣದ ಬಳಿ ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಫೆ. 26- ಹೊಸದುರ್ಗ ರೋಡ್- ರಾಮಗಿರಿ ರೈಲ್ವೆ ನಿಲ್ದಾಣಗಳ ಮಧ್ಯೆ ಅಪರಿಚಿತ ಪುರುಷನ ಶವ ಪತ್ತೆಯಾಗಿದ್ದು, ವಾರಸುದಾರರ ಪತ್ತೆಗೆ ಮನವಿ ಮಾಡಲಾಗಿದೆ. 55 ರಿಂದ 60 ವರ್ಷ ವಯಸ್ಸಿನ, 5.3 ಅಡಿ ಎತ್ತರದ, ಗೋಧಿ ಮೈ ಬಣ್ಣ, ಸದೃಢ ಮೈ ಕಟ್ಟು, ದುಂಡು ಮುಖ, ತಲೆಯಲ್ಲಿ ಕಪ್ಪು ಮಿಶ್ರಿತ ಬಿಳಿ ತಲೆ ಕೂದಲು, ಬಿಳಿ ಬಣ್ಣದ ಗಡ್ಡಮೀಸೆ ಇರುತ್ತದೆ. ಈ ಅಪರಿಚಿತ ಗಂಡಸಿನ ವಾರಸುದಾರರಿದ್ದಲ್ಲಿ, ಪತ್ತೆಯಾದಲ್ಲಿ ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯ (08192-259643, 9480802123) ಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

## ಅಪರಿಚಿತ ಮಹಿಳೆಯ ಶವ ಪತ್ತೆ

ದಾವಣಗೆರೆ, ಫೆ. 26- ಕುಮಾರಪಟ್ಟಣಂ-ಚಳಗೇರಿ ರೈಲು ನಿಲ್ದಾಣಗಳ ಮಧ್ಯೆ ರೈಲ್ವೆ ಹಳಿ ಹತ್ತಿರ ಅಪರಿಚಿತ ಮಹಿಳೆಯ ಮೃತ ದೇಹ ಪತ್ತೆಯಾಗಿದ್ದು, ವಾರಸುದಾರರು ಪತ್ತೆಯಾಗಿರುವುದಿಲ್ಲ. ಸುಮಾರು 30 ರಿಂದ 35 ವರ್ಷ ವಯಸ್ಸಿನ, ಸಾಧಾರಣ ಮೈ ಕಟ್ಟು, ದುಂಡು ಮುಖ, ತಲೆಯಲ್ಲಿ ಉದ್ದನೆಯ ಕಪ್ಪು ತಲೆ ಕೂದಲು ಇರುವ ಈ ಮೃತ ಮಹಿಳೆಯ ವಾರಸುದಾರರು ಇದ್ದಲ್ಲಿ ಅಥವಾ ಪತ್ತೆಯಾದಲ್ಲಿ ದಾವಣಗೆರೆ ರೈಲ್ವೆ ಪೊಲೀಸ್ ಠಾಣೆ (08192-259643, 9480802123) ಗೆ ಸಂಪರ್ಕಿಸಬಹುದು.

## ರಾಣೇಬೆನ್ನೂರು ರೈಲು ನಿಲ್ದಾಣ ಅಧುನೀಕರಣಕ್ಕೆ ಬಿಜೆಪಿ ಜಿಲ್ಲಾಧ್ಯಕ್ಷ ಅರುಣ್ ಪೂಜಾರ್ ಚಾಲನೆ



ರಾಣೇಬೆನ್ನೂರು, ಫೆ.26- ಅಮೃತ್ ಭಾರತ್ ಸ್ಟೇಷನ್ ಯೋಜನೆಯಲ್ಲಿ ರಾಷ್ಟ್ರದಾದ್ಯಂತ ಪ್ರಧಾನಿ ಮೋದಿ ಅವರು ಇಂದು ಚಾಲನೆ ನೀಡಿದ ವಿವಿಧ ರೈಲ್ವೆ ಕಾಮಗಾರಿಗಳಲ್ಲಿ ರಾಣೇಬೆನ್ನೂರು ನಿಲ್ದಾಣವನ್ನು 26 ಕೋಟಿ ವೆಚ್ಚದಲ್ಲಿ ಆಧುನೀಕರಿಸುವ ಕಾಮಗಾರಿ ಕಾರ್ಯಾರಂಭದ ಸಮಾರಂಭಕ್ಕೆ ಹಾವೇರಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಅರುಣ್‌ಕುಮಾರ ಪೂಜಾರ ದೀಪ ಬೆಳಗಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪೂಜಾರ್, ಸಂಸದ ಸಿ.ಎಸ್. ಉದಾಸಿ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅಯೋಧ್ಯೆಗೆ ಹೋಗುವವರಿಗೆ ನಗರದಿಂದ ನೇರ ಸಂಚಾರಕ್ಕೆ ವ್ಯವಸ್ಥೆ ಹಾಗೂ ಒಂದೇ ಭಾರತ ರೈಲು ನಿಲುಗಡೆ ಮಾಡುವಂತೆ ಮನವಿ ಮಾಡಿದರು. ವೇದಿಕೆಯಲ್ಲಿ ವರ್ತಕ ಮಲ್ಲೇಶಣ್ಣ ಅರಕೇರಿ ಹಾಗೂ ಬಿಜೆಪಿ ಮುಖಂಡರಾದ ಡಾ. ಬಸವರಾಜ ಕೇಲಗಾರ, ಕೆ.ಶಿವಲಿಂಗಪ್ಪ, ಬಸವರಾಜ ಪಾಟೀಲ, ಎಸ್.ಎಸ್. ರಾಮಲಿಂಗಣ್ಣನವರ, ಮಲ್ಲಿಕಾರ್ಜುನ ಅಂಗಡಿ ಮತ್ತಿತರರಿದ್ದರು. ಲಯನ್ಸ್ ಹಾಗು ರೋಟರಿ ಶಾಲೆಯ ವಿದ್ಯಾರ್ಥಿನಿಯರಿಂದ ಮನರಂಜನೆ ಕಾರ್ಯಕ್ರಮಗಳು ನಡೆದವು.

## ನಾಡಿದ್ದು ನಗರಕ್ಕೆ ಕೆ.ಆರ್.ಎಸ್. ಪಕ್ಷದ ಬೈಕ್ ಜಾಥಾ

ದಾವಣಗೆರೆ, ಫೆ. 26 - ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಆಯೋಜಿಸಲಾಗಿರುವ ಜನಜಾಗೃತಿ ಬೈಕ್ ಜಾಥಾ ನಾಡಿದ್ದು ದಿನಾಂಕ 28ರಂದು ಹರಿಹರ ಹಾಗೂ ನಾಡಿದ್ದು ದಿನಾಂಕ 29ರಂದು ದಾವಣಗೆರೆಗೆ ಆಗಮಿಸಲಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಡೋಣಿಹಳ್ಳಿ ಮಂಜುನಾಥ್ ಗೌಡ್ರು ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.28ರ ಬುಧವಾರ ಸಂಜೆ 4 ಕ್ಕೆ ಜಾಥಾವು ಹರಿಹರಕ್ಕೆ ಬರಲಿದೆ ಎಂದು ಹೇಳಿದರು.

ಫೆ.29ರ ಗುರುವಾರ ದಾವಣಗೆರೆಗೆ ಜಾಥಾ ಆಗಮಿಸಲಿದ್ದು, ಬೆಳಿಗ್ಗೆ 9 ಗಂಟೆಗೆ ಜಯದೇವ ವೃತ್ತದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ನಂತರ ನಗರದ ಪ್ರಮುಖ ಬೀದಿಗಳಲ್ಲಿ ಬೈಕ್ ಜಾಥಾ ನಡೆಯಲಿದೆ. ನಂತರ ಜಾಥಾ ಚನ್ನಗಿರಿಗೆ ತೆರಳಲಿದೆ ಎಂದು ಗೌಡ್ರು ಹೇಳಿದರು.

ಈ ಜಾಥಾದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಭಾಗವಹಿಸಲಿದ್ದಾರೆ. ಮಾರ್ಚ್ 2ರಂದು ಜಾಥಾ ನೆಲಮಂಗಲ ತಲುಪಲಿದ್ದು, ಅಲ್ಲಿ ಬೃಹತ್ ಸಮಾವೇಶ ನಡೆಯಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಆರ್.ಎಸ್. ಪಕ್ಷದ ಎನ್.ಎಸ್. ಅಭಿಷೇಕ್, ಕೆ.ಎಸ್. ವೀರಭದ್ರಪ್ಪ, ಪುಟ್ಟನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

## ಮೋಟಾರ್ ರಿವೈಂಡಿಂಗ್, ರಿಪೇರಿ ತರಬೇತಿ

ದಾವಣಗೆರೆ, ಫೆ. 26 - ರುಡ್ ಸೆಟ್ ಸಂಸ್ಥೆಯ ವತಿಯಿಂದ ರಿವೈಂಡಿಂಗ್ ಮತ್ತು ರಿಪೇರಿ ಕುರಿತ ತರಬೇತಿಯನ್ನು ಮಾ. 15 ರಿಂದ 30 ದಿನಗಳ ಕಾಲ ಉಚಿತವಾಗಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮಾರ್ಚ್ 10 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 9740982585, 9380162042, 9113880324 ಗೆ ಸಂಪರ್ಕಿಸಬಹುದೆಂದು ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ರವಿಕುಮಾರ ತಿಳಿಸಿದ್ದಾರೆ.

## 'ಸಂಪಾದಿತಲೇ ಪರಾಕ್'

(1ನೇ ಪುಟದಿಂದ) ಬಿ.ಎಂ. ಕೃಷ್ಣಪ್ಪ ಮತ್ತು ಸಿಬ್ಬಂದಿ ವರ್ಗ ಹಾಗೂ ತಹಶೀಲ್ದಾರ್ ಕಾರ್ತಿಕ್ ಮತ್ತಿತರೆ ಸಿಬ್ಬಂದಿ ವರ್ಗದವರು ಉಸ್ತುವಾರಿ ವಹಿಸಿದ್ದರು.

ಪೊಲೀಸರು ಸೂಕ್ತ ಬಂದೋ ಬಸ್ತ್ ಏರ್ಪಡಿಸಿದ್ದರು. ಸುಮಾರು ಏಳರಿಂದ ಎಂಟು ಲಕ್ಷ ಭಕ್ತರು ಪಾಲ್ಗೊಂಡಿದ್ದರು.

## ಜ್ಞಾನವಾಪಿಯಲ್ಲಿ ಪೂಜೆ ಮುಂದುವರಿಕೆ

(1ನೇ ಪುಟದಿಂದ) ಸಮಿತಿ ಎರಡು ಅರ್ಜಿಗಳನ್ನು ದಾಖಲಿಸಿತ್ತು. ಆದರೆ, ವ್ಯಾಸ ನೆಲಮಾಳಿಗೆಯಲ್ಲಿ ಪೂಜೆ ಮುಂದುವರೆಯಲಿದೆ ಎಂದು ಹೈಕೋರ್ಟ್ ತಿಳಿಸಿದೆ.

ಜನವರಿ 17ರಂದು ಜಿಲ್ಲಾ ನ್ಯಾಯಾಲಯವು ಜಿಲ್ಲಾಧಿಕಾರಿಗಳನ್ನು ಆಸ್ತಿಯ ರಿಸೀವರ್ ಆಗಿ ನೇಮಿಸಿರುವ ಹಾಗೂ ಜನವರಿ 31ರಂದು ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಿ ಹೊರಡಿಸಿರುವ ಆದೇಶದಲ್ಲಿ ಮಧ್ಯ ಪ್ರವೇಶಿಸಲು ಯಾವುದೇ ಕಾರಣಗಳಿಲ್ಲ ಎಂದು ಹೈಕೋರ್ಟ್ ಹೇಳಿದೆ.

ಈ ಬಗ್ಗೆ ಕಕ್ಷಿದಾರರ ವಾದ ಆಲಿಸಿದ್ದ ಹೈಕೋರ್ಟ್, ಫೆಬ್ರವರಿ 15ರಂದು ಆದೇಶ ಕಾಯ್ದಿರಿಸಿತ್ತು.


ಜನವರಿ 31ರಂದು ಆದೇಶವೊಂದನ್ನು ಹೊರಡಿಸಿದ್ದ ಜಿಲ್ಲಾ ನ್ಯಾಯಾಲಯ, ಜ್ಞಾನವಾಪಿ ಸಂಕೀರ್ಣದ ಪಕ್ಕದಲ್ಲಿರುವ ಕಾಶಿ ವಿಶ್ವನಾಥ ದೇವಾಲಯ ಟ್ರಸ್ಟ್ ಪೂಜಾರಿಯೊಬ್ಬರನ್ನು ನೇಮಿಸಬೇಕು. ಅವರು ವ್ಯಾಸ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಬೇಕು ಎಂದು ತಿಳಿಸಿತ್ತು. 1993ರ ಡಿಸೆಂಬರ್‌ವರೆಗೂ ಈ ನೆಲಮಾಳಿಗೆಯಲ್ಲಿ ಪೂಜೆಗೆ ಅವಕಾಶವಿತ್ತು.

ಸ್ಥಳೀಯ ಆಡಳಿತವು ಏಳು ದಿನಗಳಲ್ಲಿ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ವ್ಯವಸ್ಥೆ ಮಾಡಬೇಕು. ಸಂಕೀರ್ಣದಲ್ಲಿ ಲೋಹದ ತಡೆಗಳೂ ಸೇರಿದಂತೆ ಅಗತ್ಯ ವ್ಯವಸ್ಥೆ ಮಾಡಬೇಕು ಎಂದು ತಿಳಿಸಲಾಗಿತ್ತು.

ಮುಘಲ್ ದೊರೆ ಔರಂಗಜೇಬ್ ಆಡಳಿತದಲ್ಲಿ ಹಿಂದೂ ದೇವಾಲಯದ ಅವಶೇಷಗಳ ಮೇಲೆ ಜ್ಞಾನವಾಪಿ ಮಸೀದಿ ನಿರ್ಮಿಸಲಾಗಿದೆ ಎಂದು ಭಾರತೀಯ ಪುರಾತತ್ವ ಇಲಾಖೆ ತಿಳಿಸಿತ್ತು.

1993ರಲ್ಲಿ ಮುಲಾಯಂ ಸಿಂಗ್ ಯಾದವ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಜ್ಞಾನವಾಪಿ ಸಂಕೀರ್ಣದಲ್ಲಿ ಪೂಜೆ ನಿಲ್ಲಿಸಿದ್ದರು.

### ಮಲೇಬೆನ್ನೂರು ಪಟ್ಟಣದ ವಿನಾಯಕ ಶ್ರೇಷ್ಠಿ ನಿಧನ



ಮಲೇಬೆನ್ನೂರು ಪಟ್ಟಣದ ಪೇಟೆ ಬೀದಿ ನಿವಾಸಿ ಎಂ.ವಿ. ವಿನಾಯಕ ಶ್ರೇಷ್ಠಿ (60 ವರ್ಷ) ಅವರು ದಿನಾಂಕ 26.02.2024 ರ ಸೋಮವಾರ ರಾತ್ರಿ 9:45ಕ್ಕೆ ಹೃದಯಾಘಾತದಿಂದ ನಿಧನರಾದರು. ಪತ್ನಿ, ಸಹೋದರ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.02.2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮಲೇಬೆನ್ನೂರು ಪಟ್ಟಣದ ಜಿಗಳಿ ರಸ್ತೆಯಲ್ಲಿರುವ ಆರ್ಯವೈಶ್ಯ ರುದ್ರಭೂಮಿಯಲ್ಲಿ ನೆರವೇರಲಿದೆ.

**ರಕ್ತದಾನ ಶ್ರೇಷ್ಠದಾನ**

# ಹರಿಹರದ ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಅಳವಡಿಕೆಗೆ ಆಗ್ರಹ



ಹರಿಹರ, ಫೆ.26- ನಗರದಲ್ಲಿ ನಾಗರಿಕರ ಸಂರಕ್ಷಣೆ ಹಾಗೂ ಅಪರಾಧಿಕ ಚಟುವಟಿಕೆಗಳ ನಿಯಂತ್ರಣಕ್ಕೆ ಸಿಸಿಟಿವಿ ಅಳವಡಿಕೆಗೆ ಅನುದಾನ ಮೀಸಲಿಡಲು ವಿಶ್ವ ರಕ್ಷಣಾ ವೇದಿಕೆಯ ಸಂಘಟನೆ ವತಿಯಿಂದ ಆಗ್ರಹಿಸಿದರು.

ಈ ವೇಳೆ ವಿಶ್ವ ರಕ್ಷಣಾ ವೇದಿಕೆಯ ಮುಖಂಡರು ಮಾತನಾಡಿ, ಹರಿಹರ ನಗರದೊಳಗೆ ಹೊಸಪೇಟೆ-ಶಿವಮೊಗ್ಗ ಮತ್ತು ಬೀರೂರು-ಸಮ್ಮಸಗಿ ಹೆದ್ದಾರಿ ಹಾದು ಹೋಗಿದೆ. ನಗರದ ಹೊರವಲಯದಲ್ಲಿ ರಾಷ್ಟ್ರೀಯ ಹೆದ್ದಾರಿ ಇದೆ, ಪೂನಾ-ಬೆಂಗಳೂರು ರೈಲು ಮಾರ್ಗವಿದೆ.ಇಲ್ಲಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ನಿತ್ಯ 1800 ಬಸ್ಸುಗಳು ಬಂದು ಹೋಗುತ್ತವೆ. ಎರಡೂ ಹೆದ್ದಾರಿಗಳಲ್ಲಿ ನಿತ್ಯ ಅಂದಾಜು 15-20 ಸಾವಿರ ಭಾರೀ ವಾಹನಗಳು ಸಂಚರಿಸುತ್ತವೆ. ಇದೆಲ್ಲದರ ಪರಿಣಾಮವಾಗಿ ಸಹಜವಾಗಿ ಇಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗಿದೆ, ಹೊಸಪೇಟೆ-ಶಿವಮೊಗ್ಗ ಹೆದ್ದಾರಿಯಂತೂ 'ಕಿಲ್ಲರ್ ರಸ್ತೆ' ಎಂದೇ ಕುಖ್ಯಾತಿ ಪಡೆದಿದೆ.

ಬೈಕ್‌ಗಳ ಕಳ್ಳತನ, ಮನೆ, ಅಂಗಡಿಗಳ ಕಳ್ಳತನವೂ ಗಣನೀಯವಾಗಿ ಹೆಚ್ಚಾಗಿದೆ. ಇಲ್ಲಿನ ಬೀರೂರು-ಸಮ್ಮಸಗಿ ಹೆದ್ದಾರಿಯಲ್ಲಿರುವ ಹಲವಾರು ಬ್ಯಾಂಕುಗಳ ಹೊರ ಭಾಗದಲ್ಲಿ ಲಕ್ಷಾಂತರ ರೂ. ನಗದನ್ನು ಕಳ್ಳರು ಅಮಾಯಕ ನಾಗರಿಕರಿಂದ ಎಗರಿಸಿದ್ದಾರೆ. ಸಿಗ್ನಲ್ ಜಂಪ್, ವಾಹನ ಚಾಲಕರಿಂದ ದುಡುಕಿನ ಚಾಲನೆ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿವೆ.

ಈ ಎಲ್ಲಾ ಸಮಸ್ಯೆಗಳ ನಿಯಂತ್ರಣಕ್ಕೆ ನಗರದ ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾಗಳ ಅಳವಡಿಕೆ ಪರಿಹಾರವಾಗಿದೆ. ಏಳೆಂಟು ವರ್ಷ ಕೆಲವು ಸರ್ಕಲ್ ಗಳಲ್ಲಿ ಸಿಸಿಟಿವಿ ಕ್ಯಾಮರಾಗಳ ಅಳವಡಿಕೆ ಮಾಡಲಾಗಿತ್ತು, ಆದರೆ ಅವುಗಳ ನಿರ್ವಹಣೆ ಮಾಡಲಾಗದೇ ಅವುಗಳೆಲ್ಲಾ ನಿರುಪಯುಕ್ತವಾಗಿ ಹೋಗಿವೆ.

ನಗರದ ಅಂದಾಜು ಒಂದೂಕಾಲು ಲಕ್ಷ ಜನರ ಸುರಕ್ಷತೆಗಾಗಿ ನಗರದ ಹತ್ತಾರು ಆಯಕಟ್ಟಿನ ಸ್ಥಳಗಳಲ್ಲಿ ಆಧುನಿಕ ಹಾಗೂ ಉತ್ತಮ ಸಾಮರ್ಥ್ಯದ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಕೆ ಮಾಡಬೇಕಿದೆ. ಇದಕ್ಕಾಗಿ ಹರಿಹರ ನಗರಸಭೆಯ 2024-25ನೇ ಸಾಲಿನ ಬಜೆಟ್ ಶೀಘ್ರವೇ ಮಂಡನೆ ಆಗಲಿದೆ. ಸದರಿ ಬಜೆಟ್‌ನಲ್ಲಿ ಈ ಕಾರ್ಯಕ್ಕಾಗಿ ಕನಿಷ್ಟ 1 ಕೋಟಿ ರೂ. ಅನುದಾನವನ್ನು ಮೀಸಲಿಡಲು ನಗರಸಭೆಯ ಆಡಳಿತಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್, ನಗರದ ಅಧಿಕಾರಿಗಳಿಗೆ ಸೂಚಿಸಬೇಕೆಂದು ಕೋರಿಕೊಳ್ಳುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ನಾಗರಾಜ್ ಭಂಡಾರಿ, ಜಿ.ವಿ. ಪ್ರವೀಣ್, ರಾಹುಲ್ ಮೆಹರ್ವಾಡೆ, ರಾಜು ಇತರರು ಹಾಜರಿದ್ದರು.

**ಕಲ್ಲು ತೂರಾಟ:** ನಿನ್ನೆ ತಡರಾತ್ರಿ ಹೊಸಭರಂಪುರ ಬಡಾವಣೆಯ ಹಲವಾರು ಮನೆಗಳ ಮೇಲೆ ಕೆಲವು ಪುಂಡ ಯುವಕರು ಕಲ್ಲನ್ನು ಎಸೆದಿದ್ದು, ಸ್ಥಳೀಯ ನಿವಾಸಿಗಳಲ್ಲಿ ಆತಂಕವನ್ನು ಉಂಟುಮಾಡಿದೆ. ಕಳೆದ ತಿಂಗಳಲ್ಲಿ ಇಲ್ಲಿ ಮನೆ ಕಳ್ಳತನ ಆಗಿದ್ದು, ಹಾಗಾಗಿ ಸ್ಥಳೀಯ ಪೊಲೀಸ್ ಇಲಾಖೆ ವತಿಯಿಂದ 'ನೈಟ್ ಬೀಟ್' ಹಾಕುವಂತೆ ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಮೊದಲ ಚುನಾವಣೆಯೂ... ಮಹಾ ಪ್ರಯೋಗವೂ...

## ಹೆಸರೇ ಇಲ್ಲದ ಮಹಿಳಾ ಮತದಾರರು...



ಮೊದಲ ಚುನಾವಣೆಗೆ ಮತಪಟ್ಟಿಗಳನ್ನು ಸಿದ್ಧಪಡಿಸುವಾಗ ಚುನಾವಣಾ ಆಯೋಗಕ್ಕೆ ಮಹಿಳಾ ಮತದಾರರಿಗೆ ಸಂಬಂಧಿಸಿದಂತೆ ದೊಡ್ಡ ಸಮಸ್ಯೆ ಎದುರಾಯಿತು. ಹಲವಾರು ರಾಜ್ಯಗಳಲ್ಲಿ ಮಹಿಳೆಯರು ತಮ್ಮ ಹೆಸರನ್ನು ಮತಪಟ್ಟಿಯಲ್ಲಿ ಬರೆಸೇ ಇರಲಿಲ್ಲ. ಇದರ ಬದಲು ಇಂಥವರ ತಾಯಿ, ಇಂಥವರ ಪತ್ನಿ ಎಂದು ಬರೆಸಿಕೊಂಡಿದ್ದರು.

ಸ್ಥಳೀಯ ಸಂಪ್ರದಾಯದ ಪ್ರಕಾರ ಮಹಿಳೆಯರು ಅಪರಿಚಿತರ ಎದುರು ತಮ್ಮ ಹೆಸರು ಹೇಳಲು ಬಯಸುತ್ತಿರಲಿಲ್ಲ. ಹೀಗಾಗಿ ಚುನಾವಣಾ ಮತಪಟ್ಟಿ ರೂಪಿಸುವವರಿಗೆ ಹೆಸರುಗಳನ್ನು ಹೇಳಿಯೇ ಇರಲಿಲ್ಲ. ಮಹಿಳೆಯರು ಮತಪಟ್ಟಿಯಲ್ಲಿ ತಮ್ಮ ನಿಜವಾದ ಹೆಸರನ್ನು ಬರೆಸಬೇಕು ಎಂದು ಮನವೊಲಿಸಲು ಸಾರ್ವಜನಿಕ ಅರಿವು ಅಭಿಯಾನವನ್ನೇ ನಡೆಸಬೇಕಾಯಿತು.

ಆಗ ದೇಶದಲ್ಲಿ 8 ಕೋಟಿ ಮಹಿಳಾ ಮತದಾರರಿದ್ದರು. ಸುಮಾರು ಇಪ್ಪತ್ತರಿಂದ 80 ಲಕ್ಷ ಮಹಿಳೆಯರು ತಮ್ಮ ನಿಜವಾದ ಹೆಸರನ್ನು ಮತಪಟ್ಟಿಯಲ್ಲಿ ಬರೆಸೇ ಇರಲಿಲ್ಲ. ಇವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕುವ ಪರಿಸ್ಥಿತಿ ಎದುರಾಗಿತ್ತು. ಬಿಹಾರ, ಉತ್ತರ ಪ್ರದೇಶ, ಮಧ್ಯ ಭಾರತ, ರಾಜಸ್ಥಾನ ಹಾಗೂ ವಿಂಧ್ಯ ಪ್ರದೇಶಗಳಲ್ಲಿ ಈ ಸಮಸ್ಯೆ ಹೆಚ್ಚಾಗಿತ್ತು.

ಮಹಿಳಾ ಮತದಾರರು ತಮ್ಮ ನಿಜವಾದ ಹೆಸರುಗಳನ್ನು ಮತಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕೆಂದು ಮನವೊಲಿಸುವುದು ಚುನಾವಣಾ ಆಯೋಗಕ್ಕೆ ದೊಡ್ಡ ಸವಾಲಾಗಿತ್ತು. ಚುನಾವಣಾ ಆಯೋಗ ಈ ಬಗ್ಗೆ ದೃಢ ನಿಲುವು ತಳೆದಿತ್ತು ಎಂದು ದೆಹಲಿಯ ಮಾಜಿ ಮುಖ್ಯ ಚುನಾವಣಾ ಅಧಿಕಾರಿ ಚಂದ್ರ ಭೂಷಣ್ ಕುಮಾರ್ ತಿಳಿಸಿದ್ದಾರೆ.

ಆ ದಿನಗಳಲ್ಲಿ ಇದು ಕಠಿಣ ನಿಲುವಾಗಿತ್ತು. ನಂತರದ ದಿನಗಳಲ್ಲಿ ಆಯೋಗದ ನಿರ್ಧಾರ ಫಲ ನೀಡಿತು. ಈಗ ಪುರುಷರಿಗಿಂತ ಹೆಚ್ಚು ಮಹಿಳಾ ಮತದಾರರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳುತ್ತಿದ್ದಾರೆ. ಮತದಾನ ಪ್ರಮಾಣದಲ್ಲೂ ಮುಂಚೂಣಿಯಲ್ಲಿದ್ದಾರೆ.

ನವದೆಹಲಿ, ಫೆ. 26 - ಭಾರತದಂತಹ ಬೃಹತ್ ದೇಶದಲ್ಲಿ ಚುನಾವಣೆ ನಡೆಸುವುದು ಬೃಹತ್ ಸವಾಲೇ ಸರಿ. ಆದರೆ, 1951-52ರ ವೇಳೆ ಆಗಷ್ಟೇ ಭಾರತ ವಿಭಜನೆಯಿಂದ ಹೊರ ಬಂದ ಸಂದರ್ಭ, ಬಹುತೇಕ ಮತದಾರರು ಅನಕ್ಷರಸ್ಥರು, ಅದರಲ್ಲೂ ಚುನಾವಣೆಯಲ್ಲಿ ಪಾಲ್ಗೊಂಡು ಅನುಭವವೇ ಇಲ್ಲದಾಗ ಆ ಸವಾಲು ಹತ್ತಾರು ಪಟ್ಟು ಹೆಚ್ಚಾಗಿತ್ತು.

ದೇಶದ ಮೊದಲ ಲೋಕಸಭಾ ಚುನಾವಣೆಯಲ್ಲಿ 17.3 ಕೋಟಿ ಮತದಾರರು ಸೇರಿಕೊಂಡು 1,874 ಅಭ್ಯರ್ಥಿಗಳ ಹಣೇಬರಹ ನಿರ್ಧರಿಸಬೇಕಿತ್ತು. ಆಗಿನ 489 ಲೋಕಸಭಾ ಕ್ಷೇತ್ರಗಳಿಗೆ ಕೇವಲ ಒಂದು ವರ್ಷ ಹಳೆಯ ಚುನಾವಣಾ ಆಯೋಗ ಚುನಾವಣೆ ನಡೆಸಿತ್ತು.

ದುರ್ಗಮ ಪ್ರದೇಶಗಳಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಹಾಗೂ ಧಾರ್ಮಿಕ ಹಿನ್ನೆಲೆಯ ಚುನಾವಣೆಯನ್ನು ಹಲವಾರು ಸಾಗಣೆ ಸಮಸ್ಯೆಗಳ ನಡುವೆ ನಡೆಸುವ ಹೊಣೆ ಚುನಾವಣಾ ಆಯೋಗದ್ದಾಗಿತ್ತು.

1951-52ರಲ್ಲಿ ನಡೆಸಲಾದ ಮೊದಲ ಲೋಕಸಭಾ ಚುನಾವಣೆಯು ಆಗ ವಿಶ್ವದ ಅತಿ ದೊಡ್ಡ ಪ್ರಜಾಸತ್ತಾತ್ಮಕ ಕಸರತ್ತಾಗಿತ್ತು ಎಂದು ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ. ಕುರೇಶಿ ತಿಳಿಸುತ್ತಾರೆ.

ಮೊದಲ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಸುಕುಮಾರ್ ಸೇನ್ ಅವರು ಶೂನ್ಯದಿಂದ ಚುನಾವಣಾ ಪ್ರಕ್ರಿಯೆ ಆರಂಭಿಸಿ, ಅತ್ಯುತ್ತಮ ಕಾರ್ಯನಿರ್ವಹಿಸಿದ್ದರು. ಯಾವುದೇ ಅನುಭವ ಇಲ್ಲದೇ, ಯಾವುದೇ ಮೂಲಭೂತ ಸೌಲಭ್ಯ ಇಲ್ಲದೇ ಚುನಾವಣಾ ಕಸರತ್ತು ನಡೆಸುವುದು ಸುಲಭದ ಮಾತಾಗಿರಲಿಲ್ಲ ಎಂದು ಕುರೇಶಿ ಹೇಳುತ್ತಾರೆ.

ಭಾರತ ನಡೆಸಿದ ಚುನಾವಣಾ ಪ್ರಕ್ರಿಯೆಯು ಒಂದು ರೀತಿ ಮಹಾ ಪ್ರಯೋಗವೇ ಆಗಿತ್ತು. ಆ ಸಂದರ್ಭದಲ್ಲಿ ವಾಸ್ತವ ಚುನಾವಣೆ ನಡೆಸುವುದಕ್ಕೆ ಮುಂಚೆ ಅಣಕು ಚುನಾವಣೆಗಳನ್ನೂ ನಡೆಸಲಾಗಿತ್ತು.

ಅಕ್ಟೋಬರ್ 25, 1951ರಲ್ಲಿ ಲೋಕಸಭೆಗೆ ಮೊದಲ ಹಂತದ ಮತದಾನ ಆರಂಭವಾಗಿತ್ತು. ನಾಲ್ಕು ತಿಂಗಳ ಕಾಲ ಚುನಾವಣಾ ಪ್ರಕ್ರಿಯೆ ನಡೆದಿತ್ತು. 17 ದಿನಗಳಲ್ಲಿ ಮತದಾನ ನಡೆಸಲಾಗಿತ್ತು.

ಮೊದಲ ಚುನಾವಣೆಯ ಸಂದರ್ಭದಲ್ಲಿ ತೆಗೆದುಕೊಳ್ಳಲಾದ ಹಲವಾರು ನಿರ್ಧಾರಗಳು ನಂತರದಲ್ಲಿ ಚುನಾವಣಾ ಪ್ರಕ್ರಿಯೆಯ ಅವಿಭಾಜ್ಯ ಅಂಗಗಳಾದವು. ಇದರಲ್ಲಿ ಮತದಾರರ ಬೆರಳಿಗೆ ಅಳಿಸಲಾಗದ ಶಾಯಿ ಅಂಟಿಸುವುದೂ ಸೇರಿದೆ ಎಂದು ದೆಹಲಿಯ ಮಾಜಿ ಮುಖ್ಯ ಚುನಾವಣಾ ಅಧಿಕಾರಿ ಚಂದ್ರ ಭೂಷಣ್ ಕುಮಾರ್ ಹೇಳಿದ್ದಾರೆ.



ಮೊದಲಿನ ಚುನಾವಣೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ಪ್ರತ್ಯೇಕ ಮತಪೆಟ್ಟಿಗೆಗಳನ್ನು ಇರಿಸಲಾಗುತ್ತಿತ್ತು. ಈ ಪೆಟ್ಟಿಗೆಗಳಿಗೆ ಬೇರೆ ಬೇರೆ ಬಣ್ಣ ಬಳಿಯಲಾಗುತ್ತಿತ್ತು. ಮತದಾರರು ತಾವು ಬಯಸಿದ ಅಭ್ಯರ್ಥಿಯ ಹೆಸರಿರುವ ಪೆಟ್ಟಿಗೆಗೆ ಮತ ಹಾಕಬೇಕಿತ್ತು.

ಚುನಾವಣೆಗಾಗಿ 1.32 ಲಕ್ಷ ಮತಗಟ್ಟೆ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಹಿಮಾಚಲ ಪ್ರದೇಶದಲ್ಲಿ ಮೊದಲ ಮತದಾನ ನಡೆದಿತ್ತು. ಹಿಮಪಾತ ಆರಂಭವಾಗುವ ಮುಂಚೆ ಮತದಾನ ಪೂರ್ಣಗೊಳಿಸುವ ಸಲುವಾಗಿ ಈ ರಾಜ್ಯಕ್ಕೆ ಮೊದಲ ಹಂತದಲ್ಲಿ ಚುನಾವಣೆ ನಡೆಸಲಾಗಿತ್ತು.

ರಾಜಸ್ಥಾನದ ಮರು ಭೂಮಿಯಲ್ಲಿ ಚುನಾವಣೆ ನಡೆಸುವುದು ಆಯೋಗಕ್ಕೆ ದೊಡ್ಡ ಸವಾಲಾಗಿತ್ತು. ಇಲ್ಲಿನ ದುರ್ಗಮ ಪ್ರದೇಶಗಳಲ್ಲಿ ರಸ್ತೆಗಳೂ ಇರಲಿಲ್ಲ, ಸಂಪರ್ಕ ಸೌಲಭ್ಯವೂ ಇರಲಿಲ್ಲ.

ಜೋಧಪುರ, ಜೈಸಲ್ಮಾರ್ ಮುಂತಾದ ಕಡೆಗಳಲ್ಲಿ ಮತಗಟ್ಟೆ ಸಿಬ್ಬಂದಿಯನ್ನು ಒಂಟೆಯ ಮೇಲೆ ಕರೆ ತರಲಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ಒಂಟೆಗಳನ್ನು ಬಾಡಿಗೆಗೆ ಪಡೆಯಲಾಗಿತ್ತು. ಮತಗಟ್ಟೆ ಸಿಬ್ಬಂದಿ ತೆರಳುವುದೂ ಒಂದು ರೀತಿ ಮೆರವಣಿಗೆಯಂತೆ ಕಾಣುತ್ತಿತ್ತು.

ಸಾರ್ವಜನಿಕ ಕಟ್ಟಡಗಳು ಲಭ್ಯವಿಲ್ಲದ ಕಡೆಗಳಲ್ಲಿ ಅಂಚೆ ಕಚೇರಿಗಳು ಹಾಗೂ ಖಾಸಗಿ ಕಟ್ಟಡಗಳನ್ನೂ ಮತದಾನಕ್ಕೆ ಬಳಸಲಾಗಿತ್ತು.

ಮೊದಲ ಚುನಾವಣೆ ಕೆಟ್ಟ ಅನುಭವ ಎಂದೇ ಹಲವಾರು ವಿದೇಶಿ ಟೀಕಾಕಾರರು ಹೇಳಿದ್ದರು. ಆ ಸಮಯದಲ್ಲಿ ದೇಶದಲ್ಲಿ ಶೇ.84ರಷ್ಟು ಜನರು ಅನಕ್ಷರಸ್ಥರಾಗಿದ್ದರು. ಚುನಾವಣೆ ವಿಫಲವಾಗಲಿದೆ ಎಂದೇ ಅವರು ಭಾವಿಸಿದ್ದರು ಎಂದು ಮಾಜಿ ಮುಖ್ಯ ಚುನಾವಣಾ ಆಯುಕ್ತ ಕುರೇಶಿ ಹೇಳುತ್ತಾರೆ.

ಅನಕ್ಷರತೆ, ಬಡತನ, ಸಾಮಾಜಿಕ ವಿಭಜನೆ, ಕೋಮು ವಿಭಜನೆಗಳು ಆಗ ಹೆಚ್ಚಾಗಿದ್ದವು. ಈ ಸಂದರ್ಭದಲ್ಲಿ ಮೊದಲ ಚುನಾವಣೆ ನಡೆಸುವುದೇ ತಪ್ಪು ಎಂಬ ಭಾವನೆಯೂ ಅವರಲ್ಲಿತ್ತು.

17.32 ಕೋಟಿ ಮತದಾರರ ಪೈಕಿ 8.86 ಕೋಟಿ ಜನರು ಮೊದಲ ಚುನಾವಣೆಯಲ್ಲಿ ತಮ್ಮ ಹಕ್ಕು ಚಲಾಯಿಸಿದ್ದರು. ಶೇ.51.15ರಷ್ಟು ಮತದಾನವಾಗಿದ್ದು, ಯಾವ ದೃಷ್ಟಿಯಿಂದಲೂ ಕಡಿಮೆಯಲ್ಲ ಎಂದು ಕುರೇಶಿ ಹೇಳುತ್ತಾರೆ.

ಇಷ್ಟು ದೊಡ್ಡ ಪ್ರಮಾಣದ ಚುನಾವಣಾ ಕಸರತ್ತು ಹಿಂದೆಂದೂ ನಡೆಸಿರಲಿಲ್ಲ. ಭಾರತದ ಪ್ರಜಾಪ್ರಭುತ್ವದ ಭವಿಷ್ಯ ಈ ಮೊದಲ ಚುನಾವಣೆ ಮೇಲೆ ಹೆಚ್ಚಾಗಿ ಅವಲಂಬಿಸಿತ್ತು. ಈ ಚುನಾವಣೆಯಲ್ಲಿ ಜನರು ಉತ್ಸಾಹದಿಂದ ಪಾಲ್ಗೊಂಡಿದ್ದು, ಭಾರತದಲ್ಲಿ ಪ್ರಜಾಪ್ರಭುತ್ವ ಬಲಪಡಿಸಲು ದೊಡ್ಡ ಪ್ರಮಾಣದಲ್ಲಿ ನೆರವಾಯಿತು.

## ರಾಷ್ಟ್ರ ಧ್ವಜವೂ ಚುನಾವಣಾ ಚಿಹ್ನೆಯಾಗಿತ್ತು !!

1951ರಲ್ಲಿ ಸಾಕಷ್ಟು ಮತದಾರರು ಅನಕ್ಷರಸ್ಥರಿದ್ದರು. ಅವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಚುನಾವಣಾ ಆಯೋಗವು ಅಭ್ಯರ್ಥಿಗಳಿಗೆ ಚಿಹ್ನೆ ನೀಡುವ ಪದ್ಧತಿ ಜಾರಿಗೆ ತಂದಿತು. ಆ ಪದ್ಧತಿ ಈಗ ಚುನಾವಣೆಯ ಅವಿಭಾಜ್ಯ ಅಂಗವಾಗಿದೆ.

ಆ ಸಂದರ್ಭದಲ್ಲಿ ಭಾರತದ ಸಾಕ್ಷರರ ಪ್ರಮಾಣ ಕೇವಲ ಶೇ.16.6 ಆಗಿತ್ತು. ಹೀಗಾಗಿ ಮತದಾರರು ಹೆಸರು ನೋಡಿ ಮತ ಚಲಾಯಿಸುವುದು ಅಸಾಧ್ಯದ ಮಾತಾಗಿತ್ತು ಎಂದು ಚುನಾವಣಾ ಆಯೋಗದ 1955ರ ವರದಿ ತಿಳಿಸಿದೆ.

ಮತದಾರರಿಗೆ ಸುಲಭವಾಗಿ ಅರ್ಥವಾಗುವ ರೀತಿಯ ಚಿಹ್ನೆಗಳನ್ನು ನೀಡಲಾಗಿತ್ತು. ಆ ಸಂದರ್ಭದಲ್ಲಿ ಧಾರ್ಮಿಕ ಇಲ್ಲವೇ ಭಾವನಾತ್ಮಕ ಚಿಹ್ನೆಗಳಿಗೆ ಆಕ್ಷೇಪ ಇರಲಿಲ್ಲ. ದೇವಾಲಯ, ರಾಷ್ಟ್ರ ಧ್ವಜ, ಚರಖ ಇತ್ಯಾದಿಗಳ ಚಿಹ್ನೆಗಳಿಗೆ ಅನುಮತಿ ನೀಡಲಾಗಿತ್ತು.

ಆಗಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಎರಡು ಎತ್ತುಗಳು ನೇಗಿಲು ಹೊಂದಿರುವ ಚಿಹ್ನೆ ಪಡೆದುಕೊಂಡಿತ್ತು. ಸೋಷಿಯಲಿಸ್ಟ್ ಪಾರ್ಟಿಯು ಮರ, ಕಿಸಾನ್ ಮಜ್ದೂರ್ ಪಾರ್ಟಿಯು ಗುಡಿಸಲು, ಅಖಿಲ ಭಾರತೀಯ ರಾಮ ರಾಜ್ಯ ಪರಿಷತ್ ಪಕ್ಷವು ಉದಯಿಸುವ ಸೂರ್ಯ, ಬೋಲ್ಶೆವಿಕ್ ಪಾರ್ಟಿಯು ನಕ್ಷತ್ರ ಹಾಗೂ ಅಖಿಲ ಭಾರತೀಯ ಜನ ಸಂಘವು ದೀಪದ ಚಿಹ್ನೆ ಪಡೆದುಕೊಂಡಿತ್ತು.

## ಯುವ ಕನಸೇ ನನ್ನ ಬದ್ಧತೆ : ಮೋದಿ

ನವದೆಹಲಿ, ಫೆ. 26 – ವಿಕಸಿತ ಭಾರತವು ಯುವ ಕನಸಿನ ಭಾರತವಾಗಿರಲಿದೆ. ಹೀಗಾಗಿ ಭವಿಷ್ಯದ ಭಾರತ ರೂಪಿಸುವಲ್ಲಿ ಅವರಿಗೆ ಗರಿಷ್ಠ ಹಕ್ಕಿರಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ರೈಲ್ವೆ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದ ನಂತರ ಮಾತನಾಡಿದ ಪ್ರಧಾನಿ ಮೋದಿ, ರೈಲ್ವೆ ಈಗ ರೂಪಾಂತರಣವಾಗುತ್ತಿದೆ. ಇದರ ಲಾಭ ಶಾಲಾ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವವರು ಹಾಗೂ 35 ವರ್ಷದೊಳಗಿನವರಿಗೆ ತಲುಪಲಿದೆ ಎಂದು ಹೇಳಿದರು.



ಈ ಕಾರ್ಯಕ್ರಮದಲ್ಲಿ ಮೋದಿ 554 ಅಮೃತ ಭಾರತ ರೈಲ್ವೆ ನಿಲ್ದಾಣಗಳಿಗೆ ಶಿಲಾನ್ಯಾಸ ನೆರವೇರಿಸಿದರು. ಇದೇ ವೇಳೆ ಹಲವಾರು ರಸ್ತೆ ಮೇಲ್ಸೇತುವೆ ಹಾಗೂ ಕೆಳ ಸೇತುವೆಗಳನ್ನು ಉದ್ಘಾಟಿಸಿದರು.

ವಿಕಸಿತ ಭಾರತ ಯಾವ ರೀತಿ ರೂಪುಗೊಳ್ಳಬೇಕು ಎಂಬುದನ್ನು ನಿರ್ಧರಿಸುವಲ್ಲಿ ಯುವ ಪೀಳಿಗೆಗೆ ಆದ್ಯತೆ ಇರಬೇಕು. ಯುವಕರ ಕನಸುಗಳೇ ಮೋದಿಯ ಬದ್ಧತೆ ಎಂದು ಹೇಳಲು ಬಯಸುತ್ತೇನೆ.

ನಿಮ್ಮ ಕನಸು, ನಿಮ್ಮ ಪರಿಶ್ರಮ ಹಾಗೂ ಮೋದಿ ಬದ್ಧತೆಯಿಂದ ವಿಕಸಿತ ಭಾರತ ಗ್ಯಾರಂಟಿಯಾಗಿ ರೂಪುಗೊಳ್ಳಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ಹೊಸ ಯೋಜನೆಗಳನ್ನು ಕೈಗೊಳ್ಳುತ್ತಿರುವ ವೇಗ ಹಾಗೂ ಪ್ರಮಾಣದಿಂದ ಎಲ್ಲರೂ ಸ್ತಂಭೀಭೂತರಾಗಿದ್ದಾರೆ ಎಂದು ಮೋದಿ ಹೇಳಿದ್ದಾರೆ. ಕಳೆದ ಕೆಲ ದಿನಗಳಲ್ಲಿ ಜಮ್ಮು ಹಾಗೂ ಗುಜರಾತ್‌ನಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪ್ರಧಾನಿ ಪಾಲ್ಗೊಂಡಿದ್ದರು.

ಈ ಬಗ್ಗೆ ಮಾತನಾಡಿದ ಪ್ರಧಾನಿ, ಹತ್ತಾರು ಐ.ಐ.ಟಿ. ಹಾಗೂ ಐ.ಐ.ಎಂ.ಗಳು, ಐದು ಎಐಐಎಂಎಸ್‌ಗಳನ್ನು ಲೋಕಾರ್ಪಣೆ ಮಾಡಲಾಗಿದೆ ಎಂದು ಹೇಳಿದರು.

## ಹಿಂಬಾಗಿಲಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಇಲ್ಲ : ಶರ್ಮ

ಗುವಾಹತಿ, ಫೆ. 26 – ಏಕರೂಪದ ನಾಗರಿಕ ಸಂಹಿತೆಯನ್ನು ಹಿಂಬಾಗಿಲ ಮೂಲಕ ಜಾರಿಗೆ ತರುವುದಿಲ್ಲ. ಸಾಂಪ್ರದಾಯಿಕ ಪದ್ಧತಿಗಳು ಏಕರೂಪ ನಾಗರಿಕ ಸಂಹಿತೆ ವ್ಯಾಪ್ತಿಗೆ ಬರುವುದಿಲ್ಲ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ತಿಳಿಸಿದ್ದಾರೆ.

ಅಸ್ಸಾಂ ಗುಣಪಡಿಸುವ (ದುಷ್ಟಪದ್ಧತಿ ತಡೆ) ಮಸೂದೆ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಶರ್ಮ, ಕೆಲ ವ್ಯಕ್ತಿಗಳು ದುರುದ್ದೇಶದಿಂದ ವರ್ತಿಸುವುದನ್ನು ತಡೆಯಲು ಮಾತ್ರ ಸರ್ಕಾರ ಉದ್ದೇಶಿಸಿದೆ ಎಂದರು.

ಉತ್ತರಾಖಂಡದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬಂದಿದೆ. ಅಪ್ರಾಪ್ತರ ಮದುವೆ ತಡೆ, ಬಹು ಪತ್ನಿತ್ವ ನಿಷೇಧ, ವಂಶಪಾರಂಪರಿಕ ಆಸ್ತಿ ಕುರಿತ ಕಾನೂನು ಹಾಗೂ ಲಿವ್ ಇನ್ ಸಂಬಂಧಗಳಿಗೆ ಮಾತ್ರ ಏಕರೂಪ ನಾಗರಿಕ ಸಂಹಿತೆ ರೂಪುಗೊಳ್ಳಲಿದೆ. ಇದಕ್ಕೂ ಸಂಪ್ರದಾಯ ಇಲ್ಲವೇ ಪದ್ಧತಿಗಳಿಗೆ ಸಂಬಂಧವಿಲ್ಲ ಎಂದು ಶರ್ಮ ಹೇಳಿದ್ದಾರೆ.

ಉತ್ತರಾಖಂಡ ಹಾಗೂ ಗುಜರಾತ್ ವಿಧಾನಸಭೆಗಳಲ್ಲಿ ಈಗಾಗಲೇ ಏಕರೂಪ ನಾಗರಿಕ ಸಂಹಿತೆ ಮಂಡಿಸಲಾಗಿದೆ. ಅಸ್ಸಾಂನಲ್ಲೂ ಇದೇ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಶರ್ಮ ಕಳೆದ ತಿಂಗಳು ಹೇಳಿದ್ದರು.

ಅಸ್ಸಾಂ ವಿಧಾನಸಭೆಯಲ್ಲಿ ಚರ್ಚೆಯ ನಂತರ ಗುಣಪಡಿಸುವ ದುಷ್ಟಪದ್ಧತಿ ತಡೆ ಮಸೂದೆಯನ್ನು ಅಂಗೀಕರಿಲಾಗಿದೆ. ಮಾಂತ್ರಿಕವಾಗಿ ರೋಗ ಗುಣಪಡಿಸುವುದಾಗಿ ಹೇಳಿ ಜನರನ್ನು ವಂಚಿಸುವುದನ್ನು ತಡೆಯಲು ಈ ಮಸೂದೆ ರೂಪಿಸಲಾಗಿದೆ.

1935ರ ಅಸ್ಸಾಂ ಮುಸ್ಲಿಂ ಮದುವೆ ಹಾಗೂ ವಿಚ್ಛೇದನ ನೋಂದಣಿ ಕಾಯ್ದೆಯನ್ನು ವಾಪಸ್ ಪಡೆಯಲು ಅಸ್ಸಾಂ ಸಂಪುಟ ನಿರ್ಧಾರ ತೆಗೆದುಕೊಂಡಿದೆ. ಆದರೆ, ಇದಕ್ಕೆ ಪ್ರತಿಪಕ್ಷಗಳು ವಿರೋಧಿಸುತ್ತಿವೆ ಎಂದು ಮುಖ್ಯಮಂತ್ರಿ ಶರ್ಮ ಆಕ್ಷೇಪಿಸಿದರು.

ಕಾಂಗ್ರೆಸ್ ಹಾಗೂ ಎಐಯುಡಿಎಫ್‌ಗಳು ಐದಾರು ವರ್ಷದವರ ಮದುವೆಯನ್ನು ಬೆಂಬಲಿಸುತ್ತವೆಯೇ? ಮದುವೆ ವಯಸ್ಸಿನ ಬಗ್ಗೆ ಒಮ್ಮತ ಸಾಧ್ಯವಿಲ್ಲವೇ? ಬಾಲ್ಯವಿವಾಹಕ್ಕೆ ಕುಮ್ಮಕ್ಕು ನೀಡುವ ಶಾಸನಗಳನ್ನು ರದ್ದುಗೊಳಿಸಬೇಕಿದೆ ಎಂದು ಮುಖ್ಯಮಂತ್ರಿ ಶರ್ಮ ಹೇಳಿದರು.

1935ರ ಅಸ್ಸಾಂ ಮುಸ್ಲಿಂ ಮದುವೆ ಹಾಗೂ ವಿಚ್ಛೇದನ ನೋಂದಣಿ ಕಾಯ್ದೆಯ ಅನ್ವಯ ಅಪ್ರಾಪ್ತರೂ ಸಹ ಮದುವೆಯಾಗಲು ಅವಕಾಶವಿದೆ.

## ಮಲೇಬೆನ್ನೂರು : ಮತಗಟ್ಟೆ ಕೇಂದ್ರಗಳ ಪರಿಶೀಲನೆ



ಮಲೇಬೆನ್ನೂರು, ಫೆ.26- ಬರುವ ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಧಿಕಾರಿಗಳು ಮಲೇಬೆನ್ನೂರು ಪಟ್ಟಣದಲ್ಲಿರುವ ಮತಗಟ್ಟೆ ಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಮತಗಟ್ಟೆ ಕೇಂದ್ರದ ಸುಸ್ಥಿರ ಮತ್ತು ಮೂಲಭೂತ ಸೌಲಭ್ಯಗಳ ಕುರಿತು ಚುನಾವಣಾಧಿಕಾರಿಗಳಿಗೆ ಮಾಹಿತಿ ನೀಡಲಾಗುವುದೆಂದು ಪರಿಶೀಲನೆ ನಂತರ ಉಪತಹಶೀಲ್ದಾರ್ ಆರ್.ರವಿ 'ಜನತಾವಾಣಿ'ಗೆ ತಿಳಿಸಿದರು. ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್, ಪರಿಸರ ಇಂಜಿನಿಯರ್ ಉಮೇಶ್, ಆರೋಗ್ಯ ನಿರೀಕ್ಷಕ ಶಿವರಾಜ್ ಮತ್ತು ರೈತ ಮುಖಂಡ ಮುದೇಗೌಡ್ರ ತಿಪ್ಪೇಶ್ ಈ ವೇಳೆ ಹಾಜರಿದ್ದರು.

## ಶ್ರೀ ವೀರಾಂಜನೇಯ ಧ್ಯಾನ ಮಂದಿರದಲ್ಲಿ ವಿಶೇಷ ಪೂಜೆ




ದಾವಣಗೆರೆ, ಫೆ.26- ನಗರದ ಶ್ರೀ ಶಿವಕುಮಾರಸ್ವಾಮಿ ಬಡಾವಣೆಯ ಶ್ರೀ ವೀರಾಂಜನೇಯ ಮಹಾಸ್ವಾಮಿಯ ಸಾರ್ವಜನಿಕ ಧ್ಯಾನ ಮಂದಿರದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ಮತ್ತು ಜಪ, ಭಜನೆ, ಸ್ಮರಣೆ ಮತ್ತು ಆರಾಧನೆ, ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ವೀರಾಂಜನೇಯ ಸ್ವಾಮಿಗೆ ನೈವೇದ್ಯ, ಗಂಗಾಜಲ ಅಭಿಷೇಕ, ಕ್ಷೀರಾಭಿಷೇಕ, ಪಂಚಾಮೃತ ಅಭಿಷೇಕ, ಪೂಜೆ ಮಹಾಮಂಗಳಾರತಿಯು ಶ್ರೀ ಬಸವರಾಜ ಗುರೂಜಿ ಯವರಿಂದ ನೆರವೇರಿತು.

ಸಂಜೆ ಧ್ಯಾನ ಮಂದಿರದಲ್ಲಿ ಪೂಜ್ಯರ ಸಾನ್ನಿಧ್ಯದಲ್ಲಿ ಕಂಚಿಕೆರೆ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯವರು ಭಜನೆ, ಸಂಗೀತ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಪ್ರಕಾಶ್ ಹೊಸಮನಿ ಶಾಮನೂರು ಇವರಿಂದ ಸರ್ವ ಭಕ್ತಾದಿಗಳಿಗೆ ದಾಸೋಹ ಸೇವೆ ನೆರವೇರಿತು.

## ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಕಡು ಬಡವರಿಗೆ ಸೈಕಲ್ ವಿತರಣೆ

ದಾವಣಗೆರೆ, ಫೆ. 26- ಸಾರ್ವಜನಿಕರ ಆರೋಗ್ಯ ದೃಷ್ಟಿ, ವಾಯು ಮಾಲಿನ್ಯ ನಿಯಂತ್ರಣ ಮತ್ತು ಬಡವರ ಸಣ್ಣ ಆರ್ಥಿಕತೆ ಉಳಿತಾಯಕ್ಕಾಗಿ ಕಡು ಬಡವರಿಗೆ ಸೈಕಲ್ ಸವಾರಿ ಮಾಡಲು ಪ್ರೋತ್ಸಾಹಿಸಲಾಗುತ್ತಿದೆ. ಕೂಲಿ ಕಾರ್ಮಿಕರು, ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪತ್ರಿಕಾ ವಿತರಕರಿಗೆ ರೂ. 7000 ಬೆಲೆ ಬಾಳುವ ಹರ್‌ಕ್ಯುಲಸ್ ಸೈಕಲ್ ಅನ್ನು ಕೇವಲ ರೂ.4500 ಕ್ಕೆ ನೀಡಲಾಗುತ್ತಿದೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ತಿಳಿಸಿದೆ.

ಬಡವರು ಇದರ ಸದುಪಯೋಗ ಪಡೆದುಕೊಳ್ಳಬಹುದು. ವಿವರಕ್ಕೆ ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483 809312) ಅವರನ್ನು ಸಂಪರ್ಕಿಸಬಹುದಾಗಿದೆ.



## ಯರೆಚಾನಲ್‌ಗೆ ಬಾರದ ನೀರು, ಆಕ್ರೋಶ

ಮಲೇಬೆನ್ನೂರು, ಫೆ.26- ಭದ್ರಾ ಜಲಾಶಯದಿಂದ ನಾಲೆಗಳಿಗೆ ನೀರು ಬಿಡುಗಡೆ ಮಾಡಿ, 10 ದಿವಸ ಕಳೆದಿದ್ದರೂ ಮಲೇಬೆನ್ನೂರು ಉಪ ವಿಭಾಗ ವ್ಯಾಪ್ತಿಯ ಜಿಗಳಿ ಗ್ರಾಮದ ಯರೇಚಾನಲ್‌ಗೆ ಇದುವರೆಗೆ ಒಂದು ಹನಿ ನೀರು ಹರಿದು ಬಂದಿಲ್ಲ. ಈ ಭಾಗಕ್ಕೆ ನೀರು ತಲುಪಿಸಿದ ಇಂಜಿನಿಯರ್‌ಗಳ ವಿರುದ್ಧ ತೋಟಗಳ ಬೆಳೆಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಆಧುನಿಕ ಯುಗದಲ್ಲಿ ಯುವ ಸಮುದಾಯ ಎದುರಿಸುತ್ತಿರುವ ಮನೋಭಾವಗಳಿಗೆ ವಚನ ಸಾಹಿತ್ಯದ ಅರಿವು ಸಂಜೀವಿನಿ

### ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ ಜಯಂತಿ ಆಚರಣೆಯಲ್ಲಿ ಕೆ.ಹೆಚ್.ಮಂಜುನಾಥ್

ದಾವಣಗೆರೆ, ಫೆ.26- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದಾವಣಗೆರೆ ತಾಲ್ಲೂಕು ಘಟಕ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು ಅರಸಾಪುರ ಇವರುಗಳ ಸಂಯುಕ್ತಾಶ್ರಯದಲ್ಲಿ ಅಂಬಿಗರ ಚೌಡಯ್ಯ ಮತ್ತು ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮವನ್ನು ಇತ್ತೀಚಿಗೆ ಆಯೋಜಿಸಲಾಗಿತ್ತು.

ಕಾಲೇಜಿನ ಪ್ರಾಚಾರ್ಯ ಕೆ. ಎಚ್. ಮಂಜುನಾಥ ರೆಡ್ಡಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶರಣ ಸಾಹಿತ್ಯ ಕಂದಾಚಾರ, ಮೂರ್ತಿ ಪೂಜೆ ಇವುಗಳನ್ನು ಒಪ್ಪುವುದಿಲ್ಲ, ಕನ್ನಡ ಸಾಹಿತ್ಯದಲ್ಲಿಯೇ ವಚನ ಸಾಹಿತ್ಯ ಶ್ರೇಷ್ಠ ಸಾಹಿತ್ಯವಾಗಿದೆ ಎಂದು ಹೇಳುವ ಮೂಲಕ, ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಶರಣರ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.



ನಂತರ 'ವಚನ ಸಾಹಿತ್ಯದಲ್ಲಿ ವೈಚಾರಿಕತೆ' ಎಂಬ ವಿಷಯ ಕುರಿತು ಶಿಕ್ಷಣಾಧಿಕಾರಿ ಭರಮಪ್ಪ ಮೈಸೂರ್ ಅವರು ಉಪನ್ಯಾಸ ನೀಡಿದರು. ಆಧುನಿಕ ಯುಗದಲ್ಲಿ ಯುವ ಸಮುದಾಯ ಎದುರಿಸುತ್ತಿರುವ ಮನೋಭಾವಗಳಿಗೆ ವಚನ ಸಾಹಿತ್ಯದ ಅರಿವು ಸಂಜೀವಿನಿಯಾಗಬಲ್ಲದು, ಜಾತಿ ಮತ್ತು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಕೆಲ ಬೆಳವಣಿಗೆಗಳು ಯುವ ಜನರನ್ನು ವೈದಿಕತೆಯ ವಿಷದ ಕುಣಿಕೆಗೆ ಆಹಾರವಾಗಿ ಪರಿಣಮಿಸಿದೆ ಎಂದು ಹೇಳಿದರು.

ಕಾರ್ಯಕ್ರಮದ ಕಂಠಪಾಠ ಸ್ಪರ್ಧೆಯಲ್ಲಿ ಅಶ್ವಿನಿ, ಪ್ರಿಯಾಂಕ ಮತ್ತು ಸೃಷ್ಟಿ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದರು. ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಸ್. ಬಿ. ರುದ್ರಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಜಿಲ್ಲಾ ಕದಳಿ ವೇದಿಕೆಯ ಅಧ್ಯಕ್ಷರಾದ ಗಾಯತ್ರಿ ವಸ್ತ್ರದ್, ನಗರ ಘಟಕದ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿರಿಗೆರೆ ಎಂ.ಪರಮೇಶ್ವರಪ್ಪ, ಆರ್.ಸಿದ್ದೇಶಪ್ಪ, ಬಿ.ಟಿ. ಪ್ರಕಾಶ್, ಬಿ. ಎಂ. ವಿಶ್ವೇಶ್ವರಯ್ಯ, ಕಲಿವೀರ ಕಳ್ಳಿಮನಿ, ಕೆ. ಸಿ. ನಾಗರಾಜ್, ಪ್ರಕಾಶ್ ಕಡ್ಲೆಬಾಳು ಉಪಸ್ಥಿತರಿದ್ದರು.

ಶಿಕ್ಷಕಿ ಪಾಟೀಲ್ ವನಜಾಕ್ಷಿ ಪ್ರಾರ್ಥಿಸಿದರು. ಜ್ಞಾನೇಶ್ವರಿ ಸ್ವಾಗತಿಸಿದರು. ಶಿಕ್ಷಕರಾದ ಎಂ. ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.


**IN THE COURT OF 1ST ADDITIONAL SENIOR CIVIL JUDGE AND JMFC AT DAVANGERE**

**Cr. Mis No. 47 /2024**

Petitioners : 1. Sridhara DK S/O Late Kenchappa DK Aged about 51 years, Ortho Doctor R/O # 4598/9, 4th Main, 4th Cross, SS Layout B Block, DAVANGERE-577 004.

2. Sreepathi DK S/O Late Kenchappa D K Aged about 46 years, Doctor, R/O #4184, Maple, Shobha Forest view, Vajara Halli, Hundred feet Road, off Kanaka pura Road Banashakari, 6th Stage Extention, Vajara Halli, Banglore-56006.

3. Sreedevi Kenchappa Doddery D/o Late Kenchappa DK
Aged about 44 years, R/O # 204, Lilly Regency Garden CHS, Plot No.10, Sector-6, Kharghar, Raigade, Maharastra-410210 - V/S -

**RESPONDENT: Birth and Death registrar Office, City Municipal Corporation, DAVANGERE-2**

**Publication given on behalf of the Petitioners :**

The petitioners has filed this petition for the death certificate of their mother by name Smt. SUSHILAMMA W/O LATE D.K. KENCHAPPA. under Section 13 of Birth and Death registration Act and that Sri Smt. SUSHILAMMA W/O LATE D.K. KENCHAPPA has died on 22/01/2005. This notice is taken for that if anybody have any objection they may Take notice that you are hereby called upon to appear personally or

through an Advocate and say regarding this petition on Date 11.3.2024 before this Hon'ble Court at 11.00 a.m., and file

objection if any otherwise it may be deem that there is no objection and it may be consider this failing which the case against you will be heard and determined exparte.

Given under my hand and seal of this court this the 16.2.2024 day of February, 2024.

**Sd/- Abdul Samad A.L.,**
**Advocates for the petitioners.**

**By ORDER OF THE COURT**
**Sd/- 1st ACJ (Senior) and JMFC, Davangere.**

# ಹಾಲಿ ಸಂಸದರಿಗೆ ಆದ್ಯತೆ

**(1ನೇ ಪುಟದಿಂದ)** ಟಿಕೆಟ್ ನೀಡುವುದು ಸೂಕ್ತ ಎಂದು ರಾಜ್ಯ ಬಿಜೆಪಿ ನಾಯಕರು ತೀರ್ಮಾನಿಸಿದ್ದಾರೆ.

ಸ್ಪರ್ಧಾ ಕಣಕ್ಕಿಳಿಯಲು ಆಸಕ್ತಿ ಹೊಂದಿರುವ ಹಾಲಿ ಸಂಸದರಿಗೆ ಬಲವಂತವಾಗಿ ಟಿಕೆಟ್ ತಪ್ಪಿಸಿದರೆ, ಈ ಅಂಶವೇ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗೆ ತಿರುಗುಬಾಣ ಆಗುವ ಸಾಧ್ಯತೆಗಳು ಇವೆ. ಕಣಕ್ಕಿಳಿಯುವ ಆಸಕ್ತಿ ಇಲ್ಲದವರನ್ನು ಹೊರತುಪಡಿಸಿ, ಉಳಿದಂತೆ ಬಹುತೇಕರಿಗೆ ಟಿಕೆಟ್ ನೀಡುವಂತೆ ಶಿಫಾರಸ್ಸು ಮಾಡಲಾಗಿದೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಪಕ್ಷದ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ದೆಹಲಿ ವರಿಷ್ಠರು ಇದುವರೆಗೂ ನಾಲ್ಕು ಚುನಾವಣಾ ಪೂರ್ವ ಸಮೀಕ್ಷೆ ನಡೆಸಿದ್ದಾರೆ.

ಇದರ ಪ್ರಕಾರ ಐದು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ವರದಿ ಸಮೀಕ್ಷೆ ತೃಪ್ತಿ ತಂದಿಲ್ಲ, ಆದ್ದರಿಂದ ಬಿಜೆಪಿಯ ಅಂಗ ಸಂಸ್ಥೆಗಳ ಮೂಲಕ ವಾಸ್ತವಾಂಶ ತಿಳಿಯಲು ಮತ್ತೊಂದು ಸಮೀಕ್ಷೆ ನಡೆಸಿದ್ದಾರೆ.

ಇದರ ನಡುವೆಯೇ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಆರ್‌ಎಸ್‌ಎಸ್‌ನ ಮುಕುಂದ್, ತಿಪ್ಪೇಸ್ವಾಮಿ ಸೇರಿದಂತೆ ಪ್ರಮುಖರು, ರಾಜ್ಯ ಬಿಜೆಪಿ ನಾಯಕರಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಆರ್. ಅಶೋಕ್, ಸಿ.ಟಿ. ರವಿ, ಗೋವಿಂದ ಕಾರಜೋಳ, ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ ಅವರ ಜೊತೆ ಸುದೀರ್ಘ ಸಮಾಲೋಚನೆ ನಡೆಸಿ ಈ ಶಿಫಾರಸ್ಸು ಮಾಡಿದ್ದಾರೆ.

ವರಿಷ್ಠರು ರಾಜ್ಯ ಘಟಕ ಮಾಡಿರುವ ಶಿಫಾರಸ್ಸನ್ನು ಚುನಾವಣಾ ಸಮೀಕ್ಷೆ ಜೊತೆ ತಾಳೆ ಹಾಕಿ, ಮಾರ್ಚ್ ಮೊದಲ ವಾರದಲ್ಲಿ ಪಟ್ಟಿ ಬಿಡುಗಡೆ ಮಾಡಲಿದ್ದಾರೆ. ಸಭೆಯಲ್ಲಿ ಭಾಗವಹಿಸಿದ್ದ ಬಿಜೆಪಿ ಸಂಸದೀಯ ಮಂಡಳಿ ಸದಸ್ಯರೂ ಆಗಿರುವ ಯಡಿಯೂರಪ್ಪ ಅವರು, ನಿನ್ನೆಯಷ್ಟೇ ಅಭ್ಯರ್ಥಿಗಳ ಪಟ್ಟಿ ಇನ್ನು ಮೂರು-ನಾಲ್ಕು ದಿನಗಳಲ್ಲಿ ಬಿಡುಗಡೆಯಾಗಲಿದೆ ಎಂದು ತಿಳಿಸಿದ್ದಾರೆ.

# ಮಂಗನಬಾವು... ಏನಿದು ?



ಇದು ಲಾಲಾರಸ ಗ್ರಂಥಿಗಳಾದ ಪರೋಟಿಡ್, ಸಬ್ ಮಂಡಿಬುಲಾರ್ ಮತ್ತು ಸಬ್ ಮೆಂಟಲ್ ಗ್ರಂಥಿಗಳ ಕಾಯಿಲೆ. ಇದು ಹಲವಾರು ವೈರಸ್ ಮತ್ತು ಬ್ಯಾಕ್ಟೀರಿಯಾಗಳಿಂದ ಹರಡುವುದಾದರೂ ಅತೀ ಸಾಮಾನ್ಯವಾಗಿ ಮಂಪ್ಸ್ ಎಂಬ ವೈರಸ್‌ನಿಂದ ಹರಡುತ್ತದೆ.

**ರೋಗ ಲಕ್ಷಣಗಳು ಮತ್ತು ಚಿಕಿತ್ಸಾ ವಿಧಾನ :** ಕಿವಿಯ ಮುಂಭಾಗದಲ್ಲಿ ಇಲ್ಲವೇ ದವಡೆಯ ಕೆಳಭಾಗದಲ್ಲಿ ಊತ, ನೋವು ಕಾಣಿಸಿಕೊಳ್ಳುವುದು, ಜ್ವರ, ಗಂಟಲು ನೋವು, ವಾಂತಿ ಇವು ಇತರೇ ಲಕ್ಷಣಗಳು. ಅನೇಕರಲ್ಲಿ 3-5 ದಿನಗಳಲ್ಲಿ ರೋಗ ಲಕ್ಷಣಗಳು ಹತೋಟಿಗೆ ಬಂದು ಸಂಪೂರ್ಣವಾಗಿ ಚೇತರಿಸಿಕೊಳ್ಳುತ್ತಾರೆ.

ನೋವು, ಜ್ವರದ ಚಿಕಿತ್ಸೆಗೆ ಮಕ್ಕಳಿಗೆ ಪ್ಯಾರಾಸಿಟಮಾಲ್ ಔಷಧಿಯ ಬಳಕೆ ಸೂಕ್ತ. ಆಹಾರದ ಪಥ್ಯದ ಅವಶ್ಯಕತೆ ಇರುವುದಿಲ್ಲ. ಸರಳ ಮನೆ ಆಹಾರದ ಜೊತೆಗೆ ಯಥೇಚ್ಛವಾಗಿ ನೀರು, ಎಳನೀರು, ನಿಂಬೆ ಪಾನಕ, ಓಆರ್‌ಎಸ್, ಮಜ್ಜಿಗೆ ಮುಂತಾದ ದ್ರವಣಗಳನ್ನು ಕೊಡುವುದು ಸೂಕ್ತ.

ವಾಂತಿಯ ನಿಯಂತ್ರಣಕ್ಕೆ ಔಷಧಿ ಪಡೆಯಬಹುದು. ಕೆಲವು ಮಕ್ಕಳಲ್ಲಿ ರೋಗ ಉಲ್ಬಣವಾದಾಗ ವೈದ್ಯರ ಸಲಹೆ ಪಡೆದು ಆಸ್ಪತ್ರೆಗೆ ದಾಖಲಿಸಿ. ಅತಿಯಾದ ವಾಂತಿ, ಹೊಟ್ಟೆನೋವು, ತಲೆನೋವು, ನಿದ್ದೆ ಮಬ್ಬು, ನಿಶ್ಶಕ್ತಿಯ ಲಕ್ಷಣಗಳು ಕಂಡು ಬಂದಲ್ಲಿ ತುರ್ತು ಚಿಕಿತ್ಸೆಯ ಅವಶ್ಯಕತೆ ಇರುತ್ತದೆ. ಯಾವುದೇ ಆಂಟಿಬಯಾಟಿಕ್ಸ್, ನೋವು ಶಮನ ಲೇಪನಗಳು ಪಟ್ಟುಗಳ ಅವಶ್ಯಕತೆ ಇರುವುದಿಲ್ಲ. ಮೂಢನಂಬಿಕೆಗಳಿಂದ ಸರಿಯಾದ ಸಮಯಕ್ಕೆ ಸೂಕ್ತ ವೈದ್ಯಕೀಯ ಸಲಹೆ ಪಡೆಯದೇ ಹೋದರೆ ರೋಗ ಉಲ್ಬಣ ಆಗುವ ಸಾಧ್ಯತೆಗಳಿವೆ.

ಮಂಗನಬಾವು ಸಾಂಕ್ರಾಮಿಕವೇ? - ಹೌದು. ಇದು ಒಂದು ಸಾಂಕ್ರಾಮಿಕ ರೋಗ. ಹತ್ತಿರದ ಸಂಪರ್ಕ, ಸೀನುವಿಕೆ, ಕೆಮ್ಮುವಿಕೆಯಿಂದ ವೈರಾಣುಗಳು ಹರಡುತ್ತವೆ. ಸಾಮಾನ್ಯವಾಗಿ ಶಾಲಾ ಮಕ್ಕಳಲ್ಲಿ ಕಂಡು ಬರುವ ಮಂಗನಬಾವು ಎಲ್ಲಾ ವಯಸ್ಕರಲ್ಲೂ ಆಗುವ ಸಾಧ್ಯತೆ ಇದೆ. ಊತ ಕಾಣಿಸಿಕೊಂಡು 5 ದಿನಗಳವರೆಗೆ ರೋಗ ಹರಡುವ ಸಾಧ್ಯತೆ ಹೆಚ್ಚು. ಆದ್ದರಿಂದ ಪ್ರತ್ಯೇಕತೆಯು ಸೂಕ್ತ. ಶಾಲೆಗೆ ಹೋಗದಿರುವುದು ಒಳ್ಳೆಯದು. ಪರೀಕ್ಷೆಗಳ ಅನಿವಾರ್ಯತೆ ಇದ್ದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಶಾಲಾ ಸಿಬ್ಬಂದಿಯೊಂದಿಗೆ ಚರ್ಚಿಸಬೇಕು.

ದೂರದರ್ಶನದಲ್ಲಿ ಮಂಗಬಾವಿನಿಂದ ಸಾವುಂಟಾದ ಬಗ್ಗೆ ಕೇಳಿ ಬಂದಿದೆ ಇದು ನಿಜವೇ? - ಸಾಮಾನ್ಯವಾಗಿ ಮಕ್ಕಳಲ್ಲಿ ಮಂಗನಬಾವು ಯಾವುದೇ ದುಷ್ಪರಿಣಾಮಗಳನ್ನುಂಟು ಮಾಡುವುದಿಲ್ಲ. 5-7 ದಿನಗಳಲ್ಲಿ ಸಂಪೂರ್ಣವಾಗಿ ಚೇತರಿಸಿಕೊಳ್ಳುತ್ತಾರೆ.

ಕೆಲವು ಮಕ್ಕಳಲ್ಲಿ ಮೆದೋಜೀರಕ ಗ್ರಂಥಿಯ ಊತ ಕಾಣಿಸಿಕೊಳ್ಳಬಹುದು. ವಾಂತಿ ಮತ್ತು ಅತಿಯಾದ ಹೊಟ್ಟೆ ನೋವು, ಇದರ ಲಕ್ಷಣಗಳು. ಇನ್ನು ಕೆಲವು ಮಕ್ಕಳಲ್ಲಿ ಮೆದುಳು ಜ್ವರ ಆಗಬಹುದು. ಸಕಾಲಕ್ಕೆ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆಯಾದರೆ ಚೇತರಿಕೆಯಾಗುತ್ತದೆ. ಸಾಮಾನ್ಯ ಲಕ್ಷಣಗಳು ಕಂಡಾಗ ಭಯ ಬೇಡಿ. ಅಸಾಮಾನ್ಯ ಲಕ್ಷಣಗಳು ಕಂಡಲ್ಲಿ ಅಲಕ್ಷೆ ಬೇಡ.

ಇದಕ್ಕೆ ಲಸಿಕೆ ಇಲ್ಲವೇ ? - ಖಂಡಿತಾ ಇದೆ. ಎಂ.ಎಂ.ಆರ್. ಲಸಿಕೆಯನ್ನು ಮಕ್ಕಳಲ್ಲಿ 9 ತಿಂಗಳು, 15 ತಿಂಗಳು ಮತ್ತು 5 ವರ್ಷಕ್ಕೆ ಕೊಡಲಾಗುತ್ತದೆ. ಎಂ.ಆರ್. ಲಸಿಕೆ ಪಡೆದಾಗ ಮಂಗನಬಾವಿನಿಂದ ರಕ್ಷಣೆ ಸಿಗುವುದಿಲ್ಲ. 2 ವರ್ಷದ ಮೇಲಿನ ಮಕ್ಕಳು ಮತ್ತು ವಯಸ್ಕರಲ್ಲಿ ಎಂಎಂಆರ್ ಲಸಿಕೆ ದಾಖಲೆ ಇಲ್ಲದಿದ್ದಾಗ 2 ಲಸಿಕೆಗಳನ್ನು 2 ತಿಂಗಳ ಅಂತರದಲ್ಲಿ ಕೊಡಬಹುದು.

**1. ಮಂಗನ ಬಾವು ವೈರಾಣುಗಳಿಂದ ಹರಡುವ ಸಾಂಕ್ರಾಮಿಕ ರೋಗ**
**2. ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವುದು. ಬಹುತೇಕ ಮಕ್ಕಳಲ್ಲಿ ಸೌಮ್ಯ ಲಕ್ಷಣಗಳಿದ್ದು, ವೈದ್ಯರ ಸಲಹೆ ಪಡೆದು ಮನೆಯಲ್ಲೇ ಉಪಚಾರ ಮಾಡಬಹುದು.**
**3. ಊತ ಕಾಣಿಸಿಕೊಂಡ 5 ದಿನಗಳವರೆಗೆ ಶಾಲೆಗೆ ಹೋಗದಿರುವುದು ಸೂಕ್ತ**
**4. ಎಂ ಎಂ ಆರ್ ಲಸಿಕೆ ಆಗದೇ ಇದ್ದಾಗ 2 ತಿಂಗಳಿನ ಅಂತರದಲ್ಲಿ 2 ಡೋಸ್ ಎಂ ಎಂ ಆರ್ ಲಸಿಕೆ ಕೊಡಬೇಕು**
**5. ಅಸಾಮಾನ್ಯ ಲಕ್ಷಣಗಳು ಕಂಡಾಗ ತಜ್ಞ ವೈದ್ಯರ ಚಿಕಿತ್ಸೆ ಪಡೆಯುವುದು ಸೂಕ್ತ**

**- ಡಾ. ಸ್ನೇಹರೂಪಾ ಪೂಜಾರ್,**
ಪೂಜಾ ಮಕ್ಕಳ ಆಸ್ಪತ್ರೆ, ದಾವಣಗೆರೆ.

# ರಾಷ್ಟ್ರೀಯ ಜಂತು ಹುಳು ನಿರ್ಮೂಲನಾ ದಿನಾಚರಣೆ



ದಾವಣಗೆರೆ, ಫೆ. 26 - ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆಯ ವತಿಯಿಂದ ಹೆಗಡೆ ನಗರದಲ್ಲಿ 1000 ಮಕ್ಕಳಿಗೆ ಉಚಿತವಾಗಿ ಜಂತುಹುಳು ನಿರ್ಮೂಲನೆ ಮಾತ್ರೆಗಳನ್ನು ವಿತರಿಸುವ ಮೂಲಕ ರಾಷ್ಟ್ರೀಯ ಜಂತುಹುಳು ದಿನವನ್ನು ಆಚರಿಸಲಾಯಿತು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ದಾವಣಗೆರೆ ಜಿಲ್ಲಾ ಶಾಖೆಯ ಸಭಾಪತಿ ಡಾ.ಎ.ಎಂ. ಶಿವಕುಮಾರ್ ನೇತೃತ್ವದಲ್ಲಿ ಪ್ರಧಾನ ಕಾರ್ಯ ಅದರ್ಶಿ ಆನಂದ್ ಜ್ಯೋತಿ, ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಸಿವಿ ಉಮೇಶ್ ಶೆಟ್ಟಿ, ನಿರ್ದೇಶಕರಾದ ಮೊಹಮ್ಮದ್ ಇನಾಯಿತ್‌ಉಲ್ಲಾ, ಡಿ.ಎನ್. ಶಿವಾನಂದ್, ಎ.ಜೆ. ರವಿಕುಮಾರ್, ವ್ಯವಸ್ಥಾಪಕ ರವಿಂದ್ರನಾಥ್, ಕೋ-ಆರ್ಡಿನೇಟರ್ ಮತ್ತು ಕೌನ್ಸಿಲರ್ ಎನ್.ಜಿ. ಶಿವಕುಮಾರ್, ಸಿಬ್ಬಂದಿ ಪದ್ಮಬಾಯಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# 'ವಸುದೈವ ಕುಟುಂಬಕಂ' ನಾಟಕ



ದಾವಣಗೆರೆ, ಫೆ. 26- ಬಸಾಪುರದ ಶ್ರೀ ರೇವಣಸಿದ್ದೇಶ್ವರ ಪ್ರೌಢಶಾಲೆ ಸಭಾಂಗಣದಲ್ಲಿ ಮಿನಿಸ್ಟ್ರಿ ಆಫ್ ಕಲ್ಚರಲ್ (ದೆಹಲಿ) ಹಾಗೂ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘ (ದಾವಣಗೆರೆ) ಇವರ ವತಿಯಿಂದ 'ವಸುದೈವ ಕುಟುಂಬಕಂ' ನಾಟಕ ಉದ್ಘಾಟನೆಗೊಂಡಿತು. ಉದ್ಘಾಟನೆಯನ್ನು ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸೌಭಾಗ್ಯ ನೆರವೇರಿಸಿದರು. ವೇದಿಕೆಯಲ್ಲಿ ಎನ್.ಎಸ್. ರಾಜು, ಕಲ್ಲೇಶಪ್ಪ, ಎ.ಸೂರ್ಯಗೌಡ, ವಿಠೋಬರಾವ್ ಉಪಸ್ಥಿತರಿದ್ದರು.

# ಪಾಲಿಕೆ ಬಜೆಟ್ ಸಭೆಗೆ ಆಕ್ಷೇಪ

**(1ನೇಪುಟದಿಂದ)** ತೋರಿದ್ದು, ಅವರನ್ನು ಅಮಾನತ್ತಿನಲ್ಲಿಡಬೇಕು ಎಂದು ಪ್ರಸನ್ನ ಕುಮಾರ್ ಒತ್ತಾಯಿಸಿದರು.

ಈ ವೇಳೆ ಸಭೆಯ ದಿನಾಂಕ ಹಾಗೂ ಸಮಯ ಇರುವ ಕಡತದಲ್ಲಿ ಮೇಯರ್ ಅವರು 22ರಂದು ಸಹಿ ಮಾಡಿರುವ ವಿಷಯ ತಿಳಿದು ಐದು ದಿನ ಮೊದಲೇ ಸಭೆ ನಿಗದಿ ಮಾಡಲಾಗಿದೆ. ಆದ್ದರಿಂದ ಸಭೆಯನ್ನು ಮುಂದೂಡಲೇ ಬೇಕು ಎಂದು ಪ್ರಸನ್ನಕುಮಾರ್ ನೇತೃತ್ವದಲ್ಲಿ ವಿಪಕ್ಷ ಸದಸ್ಯರು ಮೇಯರ್ ಆಸನದ ಮುಂಭಾಗವೇ ಪ್ರತಿಭಟನೆಗೆ ಕುಳಿತರು.

ಈ ಸಂದರ್ಭದಲ್ಲಿ ಸಭೆಯನ್ನು ಅರ್ಧ ಗಂಟೆ ಮುಂದೂಡಲಾಯಿತು. ನಂತರ ಮತ್ತೆ ಸಭೆಗೆ ಆಗಮಿಸಿದ ಮೇಯರ್ ವಿನಾಯಕ ಅವರು, ಅಂತಿಮವಾಗಿ ಸಭೆಯನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ನಡೆಸಲಾಗುವುದು ಎಂದು ಘೋಷಿಸಿದರು. ಪಾಲಿಕೆ ಆಯುಕ್ತರಾದ ರೇಣುಕಾ, ಸ್ಥಾಯಿ ಸಮಿತಿ ಸದಸ್ಯರು ಈ ಸಂದರ್ಭದಲ್ಲಿದ್ದರು.

# ಜೇನುಗೂಡು ಸಮಾಜದ ವಾರ್ಷಿಕೋತ್ಸವ



ದಾವಣಗೆರೆ, ಫೆ. 26 - ನಗರದ ಸದ್ಯೋಜಾತ ಮಠದಲ್ಲಿ ಇತ್ತೀಚೆಗೆ ಜೇನುಗೂಡು ಮಹಿಳಾ ಸಮಾಜದ ನಾಲ್ಕನೇ ವಾರ್ಷಿಕೋತ್ಸವ ನಡೆಯಿತು.

ಮುಖ್ಯ ಅತಿಥಿಗಳಾಗಿ ಬಿ.ಎಸ್ ಉಮಾಪತಿ, ಮುರುಗೇಶ್ ಆರಾಧ್ಯ, ರವಿ ಆಗಮಿಸಿದ್ದರು. ಸುಜಾತ ನಾಗೇಶ್ ಅಧ್ಯಕ್ಷತೆ ವಹಿಸಿದ್ದರು. ವಿನೋದ, ಸಾವಿತ್ರ, ಪುಷ್ಪ ಪ್ರಾರ್ಥಿಸಿದರು. ವಿದ್ಯಾ ಭಾಸ್ಕರ್ ಸ್ವಾಗತಿಸಿದರು. ಮಧು ಉಮಾಪತಿ, ಮಧುಮತಿ, ರೂಪ ಅತಿಥಿಗಳನ್ನು ಪರಿಚಯಿಸಿದರು. ರೇಖಾ ವಾರ್ಷಿಕ ವರದಿ ಓದಿದರು. ವಿಜಯ ವೀರೇಂದ್ರ, ಚಂದ್ರಿಕಾ ಜಗನ್ನಾಥ್ ನಿರೂಪಿಸಿದರು.

# ನೀರಿನ ಸಂಪರ್ಕ ಕಡ್ಡಾಯ

**(1ನೇ ಪುಟದಿಂದ)** ಕೊರೆಯಿಸಲಾಗಿದೆ. ವರ್ಷ, ಅಂದಾಜು ವೆಚ್ಚದ ವಿವರವನ್ನು ರೆಕಾರ್ಡ್ ಮಾಡಬೇಕು. ಬರಗಾಲ ಇರುವುದರಿಂದ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ.25 ಲಕ್ಷಗಳನ್ನು ಕೊಳವೆ ಬಾವಿ ಆಳ ಹೆಚ್ಚಿಸಲು, ಕೇಶಿಂಗ್, ಪೈಪ್‌ಲೈನ್ ಅಳವಡಿಕೆಗಾಗಿ ಮಂಜೂರು ಮಾಡಲಾಗಿದೆ. ಇದಲ್ಲದೇ ವಿಪತ್ತು ನಿರ್ವಹಣಾ ಘಟಕದಿಂದಲೂ ಕುಡಿಯುವ ನೀರಿನ ತುರ್ತು ಕಾಮಗಾರಿಗಳಿಗೆ ಅವಕಾಶ ಕಲ್ಪಿಸಲಾಗಿದ್ದು ಅಧಿಕಾರಿಗಳು ಸಮಯೋಚಿತವಾಗಿ ಕೆಲಸ ಮಾಡಬೇಕೆಂದರು.

ಜಲಜೀವನ್ ಮಿಷನ್ ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಮರು ಅವಧಿ ನಿಗದಿ ಮಾಡಿ ಅನುಮೋದನೆ ನೀಡಲಾಯಿತು. ಮಿಷನ್‌ನಿಂದ ದಾವಣಗೆರೆ ತಾ. ಕಾಟಿಹಳ್ಳಿ, ಅತ್ತಿಗೆರೆ, ಹರಿಹರ ತಾ. ಜಿಗಳಿ, ಚಿಕ್ಕಬಿದರಿ ಗ್ರಾಮಗಳಿಗೆ ಮತ್ತು ಚನ್ನಗಿರಿ ತಾ. ಮೇಲನಾಯಕನಕಟ್ಟೆ, ಅಸ್ತಾಪನಹಳ್ಳಿ ಗ್ರಾಮದಲ್ಲಿ ಜೆಜೆಎಂ ರಡಿ ಕಾಮಗಾರಿ ಕೈಗೊಳ್ಳಲು ಸಮಿತಿ ಅನುಮೋದನೆ ನೀಡಿತು. ಜಲಜೀವನ್ ಯೋಜನೆ ಮುಕ್ತಾಯವಾಗುತ್ತಿರುವುದರಿಂದ ಕಾಲಮಿತಿಯಲ್ಲಿ ಗುಣಮಟ್ಟದ ಕಾಮಗಾರಿ ಕೈಗೊಂಡು ಜನರಿಗೆ ನೀರು ಒದಗಿಸಲು ಗ್ರಾಮೀಣ ನೀರು, ನೈರ್ಮಲ್ಯ ಇಲಾಖೆ ಇಂಜಿನಿಯರ್‌ಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಸಮಿತಿ ಸದಸ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಗ್ರಾಮೀಣ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವೀಂದ್ರನಾಯಕ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಅಬ್ದುಲ್ ಕಲಾಂ ಶಾಲೆಗೆ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ

ದಾವಣಗೆರೆ, ಫೆ. 26 -ದಾವಣಗೆರೆ ಜಿಲ್ಲೆಯ ಡಾ. ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ 6ನೇ ತರಗತಿ (ಸಿ.ಬಿ.ಎಸ್.ಸಿ ಪಠ್ಯಕ್ರಮ) ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 6 ನೇ ತರಗತಿ (ರಾಜ್ಯ ಪಠ್ಯಕ್ರಮ)ದಲ್ಲಿ 6ನೇ ತರಗತಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕ ಹಾಗೂ ಇನ್ನಿತರೆ ಸಾಮಗ್ರಿಗಳನ್ನು ನೀಡುವುದರ ಜೊತೆಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತದೆ. ಈ ಶಾಲೆಗಳಲ್ಲಿ ಅಲ್ಪಸಂಖ್ಯಾತ ವರ್ಗದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಶೇ.75 ರಷ್ಟು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶೇ.25 ರಷ್ಟು ಪ್ರವೇಶವಿರುತ್ತದೆ.

ಅರ್ಜಿಯನ್ನು ಮಾರ್ಚ್15 ರೊಳಗಾಗಿ ಸೇವಾ ಸಿಂಧು ಪೋರ್ಟಲ್ ವೆಬ್ ಸೈಟ್ https://sevasindhuservices.karnataka.gov.in ನಲ್ಲಿ ಮೂಲಕ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ, ಕೊಂಡಜ್ಜಿ, ಹರಿಹರ.ತಾ. ಮೊ.ಸಂ: 9008815296, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕೆರೆಬಿಳಚಿ, ಚನ್ನಗಿರಿ. ತಾ. ಮೊ.ಸಂ: 483075634, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಶಾಲೆ, ಹೊಸಕುಂದುವಾಡ, ಸಿಂಗ್ರಳ್ಳಿ ದೇವೀರಮ್ಮ ಬಡಾವಣೆ, ದಾವಣಗೆರೆ ಟೌನ್ ಮೊ.ಸಂ: 9916828601, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕೊಡಚಗೊಂಡನಹಳ್ಳಿ ನ್ಯಾಮತಿ.ತಾ. ಮೊ.ಸಂ: 9164855466, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಜಗಳೂರು. ತಾ. ಮೊ.ಸಂ: 9916828601, ತಾಲ್ಲೂಕು ವಿಸ್ತಾರಣಾಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ದಾವಣಗೆರೆ ಉಪ ವಿಭಾಗ ಮೊ.ಸಂ: 08192-250066, ಜಿಲ್ಲಾ ಮಾಹಿತಿ ಕೇಂದ್ರ ದಾವಣಗೆರೆ ಮೊ.ಸಂ: 7019837748, ತಾಲ್ಲೂಕು ಮಾಹಿತಿ ಕೇಂದ್ರ, ಹರಿಹರ ಮೊ.ಸಂ: 9845329483, ತಾಲ್ಲೂಕು ಮಾಹಿತಿ ಕೇಂದ್ರ ಚನ್ನಗಿರಿ ಮೊ.ಸಂ: 8660520572, ತಾಲ್ಲೂಕು ಮಾಹಿತಿಕೇಂದ್ರ, ಹೊನ್ನಾಳಿ ಮೊ.ಸಂ: 9739888820, ತಾಲ್ಲೂಕು ಮಾಹಿತಿ ಕೇಂದ್ರ ಜಗಳೂರು ಮೊ.ಸಂ: 9880392344 ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಮಲ್ಲಿಕಾರ್ಜುನ ಮಠದ್ ತಿಳಿಸಿದ್ದಾರೆ.

# ಯುವ ಜನರಿಗೆ ಉದ್ಯೋಗ ಸೃಷ್ಟಿ, ತರಬೇತಿ : ಸಿಎಂ ಸಿದ್ದರಾಮಯ್ಯ

**(1ನೇ ಪುಟದಿಂದ)** ನಿರುದ್ಯೋಗಿಗಳಿಗೆ ಯುವನಿಧಿಯಡಿ ನಿರುದ್ಯೋಗ ಭತ್ಯೆ ನೀಡುತ್ತಿದೆ. ಜೊತೆಗೆ ಉದ್ಯೋಗಗಳ ಸೃಷ್ಟಿ ಅಲ್ಲದೆ, ಉದ್ಯೋಗಕ್ಕೆ ಅಗತ್ಯವಿರುವ ಕೌಶಲ್ಯ ತರಬೇತಿಯನ್ನೂ ನೀಡಲಾಗುತ್ತಿದೆ. ಇದು ಸರ್ಕಾರ ಯುವಜನರಿಗೆ ನೀಡುವ ಅಭಯ ಎಂದರು.

ಹೊಸ ಹೊಸ ಉದ್ಯೋಗ ಸೃಷ್ಟಿ ಮತ್ತು ಅದಕ್ಕೆ ಅಗತ್ಯವಿರುವ ತರಬೇತಿಯನ್ನೂ ಸರ್ಕಾರ ನೀಡುತ್ತಿದ್ದು, ಈ ಗುರಿ ಸಾಧನೆಗೆ ಈಗಿರುವ ಸರ್ಕಾರಿ ತರಬೇತಿ ಕೇಂದ್ರಗಳ ಜೊತೆಗೆ ಹೊಸದಾಗಿ ಇನ್ನಷ್ಟು ಡಿಜಿಟಲೀಕೃತ ಸರ್ಕಾರಿ ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುವುದು ಎಂದು ಘೋಷಣೆ ಮಾಡಿದರು.

ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಮಾತನಾಡಿ, ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಇಂಜಿನಿಯರಿಂಗ್, ಐಟಿಐ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಹತೆ ಹೊಂದಿದ ಉದ್ಯೋಗಾಕಾಂಕ್ಷಿಗಳಿಗೆ ಮೇಳದಲ್ಲಿ ಒಂದು ಲಕ್ಷ ಉದ್ಯೋಗ ನೀಡುವ ಗುರಿ ಹೊಂದಲಾಗಿದೆ ಎಂದರು.

ನಿರುದ್ಯೋಗಿ ಯುವಜನರಿಗೆ ಸ್ಥಳದಲ್ಲೇ ಉದ್ಯೋಗ ನೀಡಬೇಕು ಎಂಬುದು ಸರ್ಕಾರದ ಪ್ರಮುಖ ಆದ್ಯತೆಯಲ್ಲೊಂದಾಗಿದ್ದು, ಉದ್ಯೋಗದ ನಿರೀಕ್ಷೆಯಲ್ಲಿದ್ದ ಯುವಜನರಿಗೆ ಸ್ಥಳದಲ್ಲೇ ಉದ್ಯೋಗ ಒದಗಿಸಲು ಯುವಜನ ಸಮೃದ್ಧಿ ಸಮ್ಮೇಳನ ಏರ್ಪಡಿಸಿರುವುದು ರಾಜ್ಯದ ಇತಿಹಾಸದಲ್ಲೇ ಚಾರಿತ್ರಿಕ ದಾಖಲೆಯಾಗಲಿದೆ. ಉದ್ಯೋಗ ನಿರೀಕ್ಷಿಸಿ ಮೇಳದಲ್ಲಿ 75 ಸಾವಿರ ಯುವ ಜನರು ಹೆಸರು ನೋಂದಣಿ ಮಾಡಿಸಿಕೊಂಡಿರುವುದು ದೇಶದ ಇತಿಹಾಸದಲ್ಲೇ ದಾಖಲೆಯಾಗಿದೆ ಎಂದು ಹೇಳಿದರು.

ಎಸ್ಸೆಸ್ಸೆಲ್ಸಿಯಿಂದ ಸ್ನಾತಕೋತ್ತರದವರೆಗೂ ವಿವಿಧ ವಿದ್ಯಾರ್ಹತೆ ಹೊಂದಿರುವವರು ಮೇಳದಲ್ಲಿ ಭಾಗವಹಿಸಿದ್ದು, ಒಂದು ಲಕ್ಷ ಉದ್ಯೋಗಗಳ ನೇಮಕಾತಿಗೆ ಖಾಸಗಿ ಕಂಪನಿಗಳು ಮುಂದೆ ಬಂದಿವೆ, ಇದು ಸಹಾ ದಾಖಲೆಯಾಗಿದೆ ಎಂದು ತಿಳಿಸಿದರು. ಪಂಚ ಗ್ಯಾರಂಟಿಗಳಲ್ಲಿ ಒಂದಾಗಿರುವ ಯುವನಿಧಿ ಯೋಜನೆ ನಿರುದ್ಯೋಗಿ ಯುವ ಸಮುದಾಯದ ಬೆನ್ನೆಲುಬಾಗಿದೆ, 1.40 ಲಕ್ಷ ಪದವೀಧರರು ಹಾಗೂ ಡಿಪ್ಲೋಮಾದಾರರ ಬ್ಯಾಂಕ್ ಖಾತೆಗಳಿಗೆ ಯೋಜನೆಯ ಹಣ ಸಂದಾಯವಾಗುತ್ತಿದೆ. ಸರ್ಕಾರ ಯುವ ಸಮುದಾಯದ ಜೊತೆಗಿದೆ ಎಂದು ಭರವಸೆ ನೀಡಿದರು.

ಮೇಳದಲ್ಲಿ ನೂರಾರು ಉದ್ಯಮಿಗಳು, ಸುಮಾರು 80 ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಯುವ ಸಮೃದ್ಧಿ ಲಾಂಛನ ಅನಾವರಣಗೊಳಿಸಲಾಯಿತು.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಪೂರ್ವ 40x60 (ಅಕ್ಕ-ಪಕ್ಕ) 30x70, 40x80, ಪಶ್ಚಿಮ 30x55, ಬನಶಂಕರಿ ಬಡಾವಣೆ ಪೂರ್ವ 30x50
ಐಗೂರು ವಿಜಯಕುಮಾರ
99457 02495

**ಕರ್ನಾಟಕ ಹೌಸಿಂಗ್ ಬೋರ್ಡ್ (KHB) ಸೈಟ್ ಮಾರಾಟಕ್ಕೆ**
ಕಮರ್ಷಿಯಲ್ ಆಗುವಂತಹ
1)12x18 ಮೀಟರ್ (40X60) ಉತ್ತರ, 100 ಅಡಿ ರಸ್ತೆಗೆ (88 ಲಕ್ಷ)
2) 9x12 ಮೀಟರ್ (30x40) ಬನ್ನಿಕೋಡ್, 60 ಅಡಿ ರಸ್ತೆಗೆ (40 ಲಕ್ಷ)
ಕಿರಣ್ ಭೂಸ್ನೂರ್ : 98440 63409
ರಿಜಿಸ್ಟರ್ ಖರ್ಚು+ಕಮೀಷನ್ ಸೇರಿ

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
ಜಿನಿಸಿಸ್ ರೆಸಾರ್ಟ್ ಎದುರುಗಡೆ 50x80 North, 40x60 West, 40x60, 40x60 South ಅಕ್ಕ-ಪಕ್ಕ, 30x50 West ಪಾರ್ಕ್ ಎದುರುಗಡೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗದಲ್ಲಿ 30x50, 30x50 South ಅಕ್ಕ-ಪಕ್ಕ, 40 ಅಡಿ ರೋಡಿಗಿದೆ. 30x40, 30x40 East ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**Property Hub**
• EC
• Eswathu
• Building Licence
• Khatha Change
96118 66449

**ಕೆಲಸಕ್ಕೆ ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಹುಡುಗರು ಬೇಕಾಗಿದ್ದಾರೆ.
98452 63750
80880 24135

**ಹೋಟೆಲ್ ಬಾಡಿಗೆಗೆ**
BK ಬಾರ್ ಅಂಡ್ ರೆಸ್ಟೋರೆಂಟ್ ಮಿಲ್ಟ್ರಿ ಹೋಟೆಲ್ ಬಾಡಿಗೆಗೆ ಇದೆ. ಬೀಡಾ ಅಂಗಡಿ ಬಾಡಿಗೆಗೆ ಇದೆ ವಿಚಾರಿಸಿ :
98441 01178

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
S.S. ಲೇಔಟ್ ಬಿ ಬ್ಲಾಕ್, 3ನೇ ಮುಖ್ಯ ರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**ಮನೆ ಲೀಸ್‌ಗೆ ಇದೆ**
24ನೇ ವಾರ್ಡ್‌ನ, # 337/101ರಲ್ಲಿ 2BHK ಮನೆ ಲೀಸ್‌ಗೆ ಇದೆ.
ಗಣೇಶ್ ಲೇಔಟ್, ದಾವಣಗೆರೆ.
98800 56262

**ಟ್ಯಾಲಿ ಆಪರೇಟರ್ ಬೇಕಾಗಿದ್ದಾರೆ.**
ಪುರುಷ ಅಭ್ಯರ್ಥಿ
98860 97065

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಸಂಭ್ರಮ ಹೋಟೆಲ್ ಹಿಂಭಾಗ 30x40 ಪಶ್ಚಿಮ, 30x57, 35x50 ಪೂರ್ವ ಅಕ್ಕ-ಪಕ್ಕ, ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
90365-74144

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಇಡ್ಲಿ, ವಡ, ಮಿರ್ಚಿ ಹಾಕುವ ಅನುಭವವುಳ್ಳ ಭಟ್ಟರು ಬೇಕಾಗಿದ್ದಾರೆ.
ಗರಿಷ್ಠ ವೇತನ ನೀಡಲಾಗುವುದು
63666 35593

**ಬೇಕಾಗಿದ್ದಾರೆ**
ಪ್ರತಿಷ್ಠಿತ ಇ-ಕಾಮರ್ಸ್ (ಆನ್ಲೈನ್ ಶಾಪಿಂಗ್) ಮತ್ತು ಅಯೋನೈಸರ್ ವಾಟರ್ ಡಿವೈಸ್ ಕಂಪನಿಗೆ ಮಾತಿನ ಚಾತುರ್ಯವುಳ್ಳ ಮತ್ತು 2 ರಿಂದ 3 ವರ್ಷ ಮಾರ್ಕೆಟಿಂಗ್ ಅನುಭವವುಳ್ಳ 24 ವರ್ಷ ಮೇಲ್ಪಟ್ಟ ಯುವಕರು ಕೂಡಲೇ ಬೇಕಾಗಿದ್ದಾರೆ. ಆಕರ್ಷಕ ವೇತನ ಮತ್ತು ಇನ್ಸೆಂಟಿವ್ ಲಭ್ಯವಿದ್ದು ಕೆಲವೇ ಹುದ್ದೆಗಳಿಗೆ ಕರೆಯಲಾಗಿದೆ. ಡಿಸ್ಟ್ರಿಬ್ಯೂಟರ್ ಕೂಡ ಬೇಕಾಗಿದ್ದಾರೆ. ಸಂಪರ್ಕಿಸಿ :
90197 00258, 90367 14507

**ಅಡಿಕೆ ತೋಟ ಮಾರಾಟಕ್ಕಿದೆ**
6 ಎಕರೆ ಮತ್ತು 13 ಎಕರೆ @ ರೂ. 60 ಲಕ್ಷ ಒಂದು ಎಕರೆಗೆ
ಹರಿಹರದಿಂದ 15 ಕಿ.ಲೋ. ಮೀಟರ್ NH4ಯಿಂದ 6 ಕಿ.ಲೋ.ಮೀಟರ್
Contct Buyers Only
ಶರ್ಮಾ, 63608 66997

**1 ಎಕರೆ ಜಮೀನು ಶಿವಮೊಗ್ಗ ರಸ್ತೆಗೆ ಮಾರಾಟಕ್ಕಿದೆ**
NH4ನಿಂದ 6 ಕಿ.ಲೋ.ಮೀಟರ್ @ ರೂ. 1 ಕೋಟಿ 60 ಲಕ್ಷ
Contct Buyers Only
ಶರ್ಮಾ, 63608 66997

**S.N. ENTERPRISES**
Water Purifications Company
ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
Basic Salary : 12,000/- Monthly
4 days Holiday
Girls work - Telecalling office work, salary 9,000/-
9740029866, 8792674847
7760174883

**ಬೇಕಾಗಿದ್ದಾರೆ**
Office Boy
Winners career Academy
98869 97892

**ಆಡಿಟರ್ ಆಫೀಸ್‌ನಲ್ಲಿ ಕೆಲಸಕ್ಕೆ ಆಫೀಸ್ ಬಾಯ್ ಬೇಕಾಗಿದ್ದಾರೆ**
ಸಂಪರ್ಕಿಸಿ : ಬಿ.ಜಿ. ಬಸವರಾಜಪ್ಪ
ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
ಸಮಯ:ಮ. :1 ರಿಂದ ಸಂಜೆ 5ರವರೆಗೆ.
99001 42052

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್ -1 ಹಾಗೂ ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ.
ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**Looking for Backend (Team Leader)**
Reliance ResQ Company
Fresher can apply
Priority for Experience candidates who know well in MS Excel
94822 57570

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**WALK IN INETRVIEW**
Required for Entire Karnataka
Team Leaders
(For Banking Recovery & Collections)
Salary Upto 30,000/- + Incentive
Telecallers
(Computer Knowledge must)
Salary upto 10,000/- + Incentive
Field Executives
2 wheeler must, Salary upto 15,000/- + Incentive + Insurance facility.
9108453333, 8310034934

**ಕಟ್ಟಡ ಬಾಡಿಗೆಗಿದೆ**
ವಾಣಿಜ್ಯೋಪಯೋಗಿ / ಕಚೇರಿ ಉಪಯೋಗಕ್ಕಾಗಿ ಸುಸಜ್ಜಿತವಾದ ಕಟ್ಟಡ ಬಾಡಿಗೆಗಿದೆ.
ಸಂಪರ್ಕಿಸಿ.
98867-34802
70222-78090

**ಬೇಕಾಗಿದ್ದಾರೆ**
ಸೇವಾ ಸಿಂಧು ಆಫೀಸಿನಲ್ಲಿ ಕಂಪ್ಯೂಟರ್ ಅನುಭವವುಳ್ಳ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
89516 67605

**3000 ಅಡಿ ಜಾಗ ನೆಲ ಬಾಡಿಗೆಗಿದೆ**
ಕಾಂಪೌಂಡ್ & ಗೇಟ್ ವ್ಯವಸ್ಥೆ ಇದೆ. (ಲಕ್ಷ್ಮಿ ವೆಂಕಟೇಶ್ವರ ಗ್ರಾನೈಟ್ಸ್ ಪಕ್ಕ) ಹದಡಿ ರಸ್ತೆ, ರಂಗನಾಥ ಬಡಾವಣೆ
9972552330, 9448697973

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
Sales Girls needed for inner wear store women's paradise, AVK College Road, Davanagere.
96204 53208

**ನೇರ ಪರೀಕ್ಷೆಗಳು**
SSLC , PUC
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
BA, B.Com, MA, M.Com, MBA (ALL),
ಶ್ರೀ ಗಂಗೋತ್ರಿ ಕರಸ್ಪಾಂಡೆನ್ಸ್ ಕಾಲೇಜ್
ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ
86602 35013

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯ ಲಿಕ್ಕರ್ ಷಾಪ್‌ನಲ್ಲಿ ಕೆಲಸ ಮಾಡಲು
• ಸಪ್ಲೈಯರ್,
• ಕ್ಲೀನಿಂಗ್ ಬಾಯ್
• ಬಿಲ್ಲಿಂಗ್ ಆಪರೇಟರ್
ತಕ್ಷಣ ಬೇಕಾಗಿದ್ದಾರೆ.
ಅನುಭವ ಇದ್ದವರಿಗೆ ಆಕರ್ಷಕ ವೇತನ ಕೊಡಲಾಗುವುದು. ಸಂಪರ್ಕಿಸಿ :
86605 83492
96060 96697
83100 87742

**ಬೇಕಾಗಿದ್ದಾರೆ**
Office Assistant cum Car Driver - 01
Salary : 10,000 to 12,000
Winners Academy, Davanagere
98869 97892

**ಜನ್ಮಾಂತರ ಚಿಕಿತ್ಸೆ**
ವಿದ್ಯಾರ್ಥಿಗಳ ಸಮಸ್ಯೆಗಳು, ಡಿಪ್ರೆಶನ್, ಅನಾರೋಗ್ಯದ ಸಮಸ್ಯೆ, ಶತ್ರು ಬಾಧೆ, ಮಾಟ-ಮಂತ್ರ, ದುಷ್ಟ ಶಕ್ತಿಗಳ ಬಾಧೆ ಹಾಗೂ ಹಿಂದಿನ ಜನ್ಮಗಳ ದೋಷಗಳ ಸಂಪೂರ್ಣ ನಿವಾರಣೆಗೆ.
80733 42011

**ಸರ್ಕಾರಿ ನೌಕರಿಗಾಗಿ**
ಗವರ್ನಮೆಂಟ್ ಜಾಬ್‌ಗೆ ಸಂಪರ್ಕಿಸಿ. ಯಾವುದೇ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸುತ್ತಿರುವ ಯುವಕ, ಯುವತಿಯರ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ.
80733 42011

**2 BHK HOUSE FOR RENT**
Ground floor, 14th cross, Siddaveerappa Layout, Davangere.
Contact No:
99644 66761

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**HOUSES FOR RENT**
1BHK, 2BHK, 3BHK First Floor, Ground Floor SS Layout `A&B' Anjaneya Layout, Siddaveerappa Layout.
77955 06795
Dakshith Iyanahalli

**FOR RENT**
Ground floor 2 BHK Independent House, 30x50 East Face, # 671/15, KSR Layout, behind APMC, near Basapura, Davangere.
99720 12043

**AVAILABLE FOR RENT**
"Khadi Siddhappa Arcade"
Office/commercial Space,
Basement- 700 sqft, Ground Floor- 600 sqft, 1st Floor- 800 sqft
Lawyer Main Road, KB Extension, Davanagere.
9844261046, 8722581400

ಓಂ ಶ್ರೀ ಕೊಡಂಗಲ್ಲೂರು ಭಗವತಿದೇವಿ
**ಜ್ಯೋತಿಷ್ಯಾಲಯ**
ಪಂಡಿತ್ ಸಂತೋಷ್ ಗುರೂಜಿ
ವ್ಯಾಪಾರ, ಆರೋಗ್ಯ, ಲಗ್ನ, ಸಂತಾನ, ಮಾಟ-ಮಂತ್ರ, ಸಾಲದ ಬಾಧೆ, ಮಾನಸಿಕ ಚಿಂತೆ, ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳು ಇದ್ದರೆ ಶಾಶ್ವತ ಪರಿಹಾರ. ಶತಃ ಸಿದ್ಧ.
99728 37663
ವಿಳಾಸ : ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ.

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

# ಪ್ರಜಾಸತ್ತಾತ್ಮಕ ಮೌಲ್ಯಗಳ ಸೃಜನಶೀಲ ಲೇಖಕ ಶ್ರೀನಿವಾಸ್‌ಗೆ ಹಿರೇಮಠ ಪ್ರಶಸ್ತಿ



ದಾವಣಗೆರೆ, ಫೆ. 26- ನಾಡಿನ ಖ್ಯಾತ ಚಿಂತಕ, ಸಾಹಿತಿ ಪ್ರೊ. ಎಸ್.ಎಸ್. ಹಿರೇಮಠರ ಹೆಸರಿನ 2024 ನೇ ಸಾಲಿನ ಕಾವ್ಯ ಪ್ರಶಸ್ತಿಗೆ ನಾಡಿನ ಕವಿ, ಕಥೆಗಾರ, ಅನುವಾದಕರೂ ಆಗಿರುವ ನಗರದ ಬಿ. ಶ್ರೀನಿವಾಸ ಅವರು ಭಾಜನರಾಗಿದ್ದಾರೆ.

ಕನ್ನಡ ಸಾಹಿತ್ಯ ಪ್ರಕಾರವಾದ ಕಾವ್ಯ ಸಾಹಿತ್ಯದಲ್ಲಿ ಜನಪರ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ಆಶಯಗಳನ್ನು ಸೃಜನಾತ್ಮಕವಾಗಿ ಅನಾವರಣಗೊಳಿಸಿ ದ್ದಲ್ಲದೆ, ಕನ್ನಡ ಸಾಹಿತ್ಯ ಲೋಕವನ್ನು ಸಮೃದ್ಧಿಗೊಳಿಸಿದ ಶ್ರೀನಿವಾಸ್ ಅವರು ಪ್ರಗತಿಪರ ಸಂಘಟನೆಗಳ ಒಡನಾಡಿಯಾಗಿ, ಮೂರು ದಶಕಗಳ ಕಾಲದ ಸಾಮಾಜಿಕ ಕಳಕಳಿಯ ಅವರ ಸಾಹಿತ್ಯಿಕ, ವೈಚಾರಿಕ ಸಾಧನೆಗೆ ಸಂದ ಫಲ ಎಂದು ಬಳ್ಳಾರಿಯ ಸಮಾಜ ವಿಜ್ಞಾನ ವೇದಿಕೆ ಅಭಿಪ್ರಾಯಪಟ್ಟಿದೆ.

ಬಳ್ಳಾರಿಯ ಗಾಂಧಿ ಭವನದಲ್ಲಿ ಕಳೆದ ವಾರ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾರಂಭದಲ್ಲಿ 'ಜನಶಕ್ತಿ' ಸಂಪಾದಕರು ಹಾಗೂ ಸಾಹಿತಿಗಳಾದ ಡಾ.ಎಸ್. ವೈ.ಗುರುಶಾಂತ್ ಮಾತನಾಡಿ, ಜೀವಪರ ವ್ಯಕ್ತಿತ್ವದ ಎಸ್.ಎಸ್.ಹಿರೇಮಠರ ಹೆಸರಿನ ಸಾಹಿತ್ಯ ಪ್ರಶಸ್ತಿಯು ಬಿ.ಶ್ರೀನಿವಾಸ ಅವರಿಗೆ ಸಂದಿರುವುದು ಅರ್ಥಪೂರ್ಣ ವಾಗಿದೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಡಾ.ಎಂಪಿ.ಎಂ.ವೀರಯ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಜಾಜಿ ದೇವೇಂದ್ರಪ್ಪ, ಸಮಾಜ ವಿಜ್ಞಾನ ವೇದಿಕೆಯ ಪಿ.ಆರ್. ವೆಂಕಟೇಶ, ಶ್ರೀಮತಿ ಕಲಾವತಿ ಹವಾಲ್ದಾರ್, ಕವಿಗಳಾದ ಬಿದಲೋಟಿ ರಂಗನಾಥ, ಮಮತಾ ಅರಸೀಕೆರೆ ಮತ್ತಿತರರು ವೇದಿಕೆಯಲ್ಲಿದ್ದರು.

## ಇಂದು ಜಗಳೂರು, ಹರಪನಹಳ್ಳಿ, ಹರಿಹರದಲ್ಲಿ ಕಾಂಗ್ರೆಸ್ ಸಭೆ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಲು ಇಂದು ಬೆಳಿಗ್ಗೆ 11.30 ಕ್ಕೆ ಜಗಳೂರು ಪ್ರವಾಸಿ ಮಂದಿರ, ಮಧ್ಯಾಹ್ನ 3 ಗಂಟೆಗೆ ಹರಪನಹಳ್ಳಿ ಪ್ರವಾಸಿ ಮಂದಿರ ಹಾಗೂ ಸಂಜೆ 6 ಕ್ಕೆ ಹರಿಹರ ಪ್ರವಾಸಿ ಮಂದಿರದಲ್ಲಿ ಸಭೆ ಕರೆಯಲಾಗಿದೆ. ಭಾರತೀಯ ರಾಷ್ಟ್ರೀಯ ಯುವ ಕಾಂಗ್ರೆಸ್ ಔಟ್ ರೀಚ್ ವಿಭಾಗದ ಕರ್ನಾಟಕ ರಾಜ್ಯ ಉಪಾಧ್ಯಕ್ಷ ವಿನಯ್ ಕುಮಾರ್ ಜಿ.ಬಿ. ಕಕ್ಕರಗೊಳ್ಳ ಅವರು ಸಭೆಯಲ್ಲಿ ಪಾಲ್ಗೊಂಡು ಲೋಕಸಭಾ ಕ್ಷೇತ್ರದ ಚುನಾವಣಾ ಆಗ ಹೋಗುಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

# ಮಕ್ಕಳು, ಶಿಶುಗಳ ಮೂತ್ರಪಿಂಡದಲ್ಲಿಯೂ ಕಲ್ಲುಗಳು

ದಾವಣಗೆರೆ, ಫೆ. 26 - ಸಾಮಾನ್ಯವಾಗಿ ವಯಸ್ಕರ ಮೂತ್ರಪಿಂಡದಲ್ಲಿ ಕಲ್ಲುಗಳು ಕಂಡುಬರುತ್ತವೆ, ಆದರೆ ಈಗ ಇದು ಮಕ್ಕಳ ಮೇಲೆ ಪರಿಣಾಮ ಬೀರಬಹುದು ಮತ್ತು ಶಿಶುಗಳಲ್ಲಿಯೂ ಸಹ ಸಂಭವಿಸಬಹುದು ಎಂದು ಬಾಪೂಜಿ ಆಸ್ಪತ್ರೆ ಯುರಾಲಜಿ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ಹೆಚ್.ಎನ್ ನವೀನ್ ತಿಳಿಸಿದರು.



ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಜರುಗಿದ ವಿವೇಕ ಪೋಷಕರ ಆರೋಗ್ಯ ಕಾರ್ಯಕ್ರಮದಲ್ಲಿ ಡಾ. ಹೆಚ್.ಎನ್ ನವೀನ್

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಜರುಗಿದ ವಿವೇಕ ಪೋಷಕರ ಆರೋಗ್ಯ ಕಾರ್ಯಕ್ರಮದಲ್ಲಿ 'ಮಕ್ಕಳು ಮತ್ತು ಮೂತ್ರಪಿಂಡದ ಕಲ್ಲುಗಳು' ಎಂಬ ವಿಷಯ ಕುರಿತಂತೆ ಅವರು ವಿಶೇಷ ಉಪನ್ಯಾಸ ನೀಡಿದರು.

ಮಕ್ಕಳಲ್ಲಿ ಮೂತ್ರಪಿಂಡದ ಕಲ್ಲುಗಳ ಚಿಕಿತ್ಸೆಯು ಕಲ್ಲಿನ ಗಾತ್ರದ ಸ್ಥಳ ಮತ್ತು ಮಗುವಿನ ಒಟ್ಟಾರೆ ಆರೋಗ್ಯ ಸೇರಿದಂತೆ ವಿವಿಧ ಅಂಶಗಳನ್ನು ಅವಲಂಬಿಸಿರುತ್ತದೆ. ದಿನವಿಡೀ ಸಾಕಷ್ಟು ದ್ರವಗಳನ್ನು ಕುಡಿಯಲು ನಿಮ್ಮ ಮಗುವಿಗೆ ಪ್ರೋತ್ಸಾಹಿಸಿ. ಸಾಕಷ್ಟು ಜಲಸಂಚಯನದಿಂದ ಕಲ್ಲು ನೈಸರ್ಗಿಕವಾಗಿ ಹೊರಹೋಗಲು ಸಹಾಯ ಮಾಡುತ್ತದೆ ಎಂದರು.

ಜಾಗತಿಕವಾಗಿ 15 ರಿಂದ 17% ರಷ್ಟು ಜನರು ಕೆಲವು ಹಂತದಲ್ಲಿ ಮೂತ್ರಪಿಂಡದ ಕಲ್ಲುಗಳಿಂದ ತೊಂದರೆಗೀಡಾಗಿದ್ದಾರೆ. ಆಹಾರದಲ್ಲಿ ಹೆಚ್ಚಿನ ಉಪ್ಪಿನಿಂದಾಗಿ, ಹೆಚ್ಚಿನ ಮಕ್ಕಳು ಈ ಸ್ಥಿತಿಯನ್ನು ಪಡೆಯುತ್ತಿದ್ದಾರೆ ಎಂಬುದಕ್ಕೆ ಈಗ ಸಾಕಷ್ಟು ಪುರಾವೆಗಳಿವೆ. ಸಾಮಾನ್ಯವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಮೂತ್ರದ ಕಲ್ಲುಗಳ ಹರಡುವಿಕೆಯು ಬದಲಾಗುತ್ತದೆ. ಕರಾವಳಿ, ಉತ್ತರ ಮತ್ತು ಮಧ್ಯ ಕರ್ನಾಟಕದಲ್ಲಿ ಹೆಚ್ಚು ಕಾಣಬಹುದು.

ಹುಡುಗರು ಮತ್ತು ಹುಡುಗಿಯರ ಮೂತ್ರಕೋಶದಲ್ಲಿ ಸಮಾನವಾಗಿ ಪರಿಣಾಮ ಬೀರುತ್ತದೆ. ಹೆಚ್ಚಿನ ಕಲ್ಲುಗಳು ಅನುವಂಶಿಕ ಅಂಶಗಳು, ಪರಿಸರ, ಜೀವನ ಶೈಲಿಯ ಸಂಯೋಜನೆಯಿಂದ ರೂಪುಗೊಳ್ಳುತ್ತವೆ. ಮೂತ್ರಪಿಂಡದಲ್ಲಿ ಕಲ್ಲುಗಳ ರಚನೆ ಮತ್ತು ಕಲ್ಲಿನ ಪ್ರತಿಬಂಧಕ ಅಂಶಗಳ ನಡುವಿನ ಅಸಮತೋಲ ನವು ಕಲ್ಲಿನ ರಚನೆಗೆ ಕಾರಣವಾಗುತ್ತದೆ.

ಕೆಳಗಿನ ಬೆನ್ನಿನಲ್ಲಿ ಅಥವಾ ಬದಿಗಳಲ್ಲಿ ತೀವ್ರವಾದ ನೋವು, ಆಗಾಗ್ಗೆ ನೋವಿನಿಂದ ಮೂತ್ರ ವಿಸರ್ಜನೆ, ವಾಕರಿಗೆ, ವಾಂತಿ, ಮೂತ್ರದಲ್ಲಿ ರಕ್ತ ಹೋಗುವಿಕೆ, ಅಸ್ಪಷ್ಟ ಮೂತ್ರ, ಜ್ವರ ಬರುವುದು ಈ ರೋಗದ ಲಕ್ಷಣಗಳಾಗಿವೆ.

ಮೂತ್ರಪಿಂಡದ ಕಲ್ಲುಗಳಿಗೆ ಸಂಬಂಧಿಸಿದ ತೀವ್ರವಾದ ನೋವನ್ನು ನಿರ್ವಹಿಸಲು ಪ್ರಬಲವಾದ ನೋವು ನಿವಾರಕಗಳು ಹೆಚ್ಚಾಗಿ ಅಗತ್ಯವಾಗಿರುತ್ತದೆ. ಕಲ್ಲುಗಳು ಮೂತ್ರದ ಸೋಂಕನ್ನು ಉಂಟು ಮಾಡಿದರೆ ಪ್ರತಿಜೀವಕಗಳನ್ನು (ಆ್ಯಂಟಿಬಯಾಟಿಕ್) ಶಿಫಾರಸು ಮಾಡಬಹುದು.

ರೋಗದ ಮರುಕಳಿಸುವಿಕೆಯನ್ನು ತಡೆಗಟ್ಟಲು ಆಹಾರದ ಮಾರ್ಪಾಡು ಅಗತ್ಯವಾಗಿರುತ್ತದೆ. ಉಪ್ಪು ಸೇವನೆಯನ್ನು ಮಿತಿಗೊಳಿಸಿ, ದ್ರವರೂಪದ ಆಹಾರ, ಹಣ್ಣು ಮತ್ತು ತರಕಾರಿಗಳನ್ನು ಹೆಚ್ಚಾಗಿ ಸೇವಿಸಬೇಕು. ಹುಳಿ ಅಂಶ ಹೆಚ್ಚಿರುವ ಹಣ್ಣುಗಳು, ಮಾಂಸ ಸೇವನೆ. ಸಂಸ್ಕರಿಸಿದ ಆಹಾರಗಳು, ತ್ವರಿತ ಆಹಾರ ಮತ್ತು ಸೋಡಾ ಇತ್ಯಾದಿ ಕಡಿಮೆಮಾಡಬೇಕು. ವೈದ್ಯರು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಕ್ಯಾಲ್ಸಿಯಂ ಭರಿತ ಆಹಾರಗಳು, ಪಾನೀಯಗಳನ್ನು ಸೇವಿಸಬೇಕು ಎಂದು ಸಲಹೆ ನೀಡಿದರು.

ಮೂತ್ರಪಿಂಡದ ಕಲ್ಲುಗಳು ಮೂತ್ರನಾಳದ ಮೂಲಕ ಹೊರಹೋಗಲು ತುಂಬಾ ದೊಡ್ಡದಾಗಿದ್ದರೆ ಶಸ್ತ್ರ ಚಿಕಿತ್ಸೆಯ ಮೂಲಕ ತೆಗೆಯುವುದು ಅನಿವಾರ್ಯವಾಗುತ್ತದೆ ಎಂದು ಡಾ. ನವೀನ್ ವಿವರಿಸಿದರು.

ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಜಿ. ಗುರುಪ್ರಸಾದ್, ಡಾ.ಬಾಣಾಪುರ ಮಠ್, ಡಾ.ಸುರೇಶ್‌ಬಾಬು, ಡಾ.ರೇವಪ್ಪ, ಡಾ. ಮೃತ್ಯುಂಜಯ, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ ಆರೋಗ್ಯ ತಪಾಸಣೆ ಶಿಬಿರ



ಹರಿಹರ ಫೆ,26- ದಾವಣಗೆರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಐ.ಸಿ.ಟಿ.ಸಿ. ವಿಭಾಗ ಮತ್ತು ದಾವಣಗೆರೆ ದುರ್ಗಾ ಶಕ್ತಿ ಏಡ್ಸ್ ತಡೆಗಟ್ಟುವ ಮಹಿಳಾ ಸಂಘದ ವತಿಯಿಂದ ನಗರದ ಗಾಂಧಿ ವೃತ್ತದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಬಸವರಾಜ್, ವಿನೋದ್ ಕುಮಾರ್, ಜಗದೀಶ್ ಡಿ.ಎಸ್. ಟಿಪ್ಪು ಸುಲ್ತಾನ್, ವಿಜಯಮ್ಮ, ಶಾಂತಿಬಾಯಿ, ಶೋಭಾ, ಶಿಲ್ಪಾ, ರೂಪಾ, ರಂಗನಾಥ, ಮಂಜುನಾಥ್ ಇತರರು ಹಾಜರಿದ್ದರು.

# ರಾಜಕೀಯದಲ್ಲಿಯೂ ದಾವಣಗೆರೆಯ ಕ್ಷೇಮದ ಗುರಿ ನನ್ನದು

ಹರಪನಹಳ್ಳಿ, ಫೆ. 26 - ವೈದ್ಯನಾಗಿ ಸೇವೆ ಸಲ್ಲಿಸುತ್ತಿರುವ ನನಗೆ ರಾಜಕೀಯ ಕ್ಷೇತ್ರಕ್ಕೆ ಬಂದು ದಾವಣಗೆರೆ ಜಿಲ್ಲೆಯ ಅಭಿವೃದ್ಧಿಗೂ ಸೂಕ್ತ ಚಿಕಿತ್ಸೆ ನೀಡಬೇಕು ಎಂದು ಜಿಲ್ಲಾದ್ಯಂತ ಒತ್ತಾಯ ಕೇಳಿ ಬಂದಿದೆ.

ಭವಿಷ್ಯದ ನಿರ್ಧಾರವು ಏನೇ ಆಗಿದ್ದರೂ ಪ್ರೀತಿ ಆರ್ಕೆ ಟ್ರಸ್ಟ್ ಮೂಲಕ ನಾವು ನೀಡುತ್ತಿರುವ ಆರೋಗ್ಯ ದಾಸೋಹ ಸೇವೆ ಚಿರಂತನವಾಗಿ ಮುಂದುವರೆಯಲಿದೆ ಎಂದು ದಾವಣಗೆರೆಯ ಆರ್ಕೆ ಆಸ್ಪತ್ರೆ ಮುಖ್ಯಸ್ಥ ಡಾ. ರವಿಕುಮಾರ್ ಟಿ.ಜಿ. ಹೇಳಿದರು.



**ಆರೈಕೆ ಆಸ್ಪತ್ರೆ ಮುಖ್ಯಸ್ಥ ಡಾ. ರವಿಕುಮಾರ್ ಟಿ.ಜಿ. ಆಶಯ**

ಹರಪನಹಳ್ಳಿ ತಾಲ್ಲೂಕಿನ ಕಮ್ಮತ್ತಹಳ್ಳಿಯಲ್ಲಿ ಆಯೋಜಿಸಲಾಗಿದ್ದ ಆರೋಗ್ಯ ಚಿಕಿತ್ಸೆ 55ನೇ ಉಚಿತ ಶಿಬಿರದಲ್ಲಿ ಮಾತನಾಡಿ, ವೈದ್ಯಕೀಯ ಸೇವೆಯಲ್ಲಿ ಸಂತೃಪ್ತನಾಗಿದ್ದ ನನ್ನನ್ನು ರಾಜಕೀಯಕ್ಕೆ ಕರೆತರುವ ಹಂಬಲ, ಒತ್ತಾಯವನ್ನು ದಾವಣಗೆರೆ ಲೋಕಸಭಾ ಕ್ಷೇತ್ರದ ಜನರೆಲ್ಲರೂ ವ್ಯಕ್ತಪಡಿಸುತ್ತಿದ್ದಾರೆ. ಆದರೆ, ನಾನು ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಸ್ಪರ್ಧಿಸುವ ಸಂಪೂರ್ಣ ನಿರ್ಧಾರವು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ವರಿಷ್ಠರಿಗೆ ಸೇರಿದೆ ಎಂದರು.

ಆರೋಗ್ಯವನ್ನು ಕಾಪಾಡಿಕೊಳ್ಳುವ ಹೊಣೆ ಮತ್ತು ಸವಾಲು ಇಂದು ಎಲ್ಲ ವಯೋಮಾನ ದವರಿಗೂ ಕಾಡುತ್ತಿದ್ದು, ಇದಕ್ಕೆ ಬದಲಾದ ವಾತಾವರಣ, ಉಸಿರಾಡುವ ಗಾಳಿ, ಕುಡಿಯುವ ನೀರು, ಸೇವಿಸುವ ಆಹಾರದ ಪಾತ್ರವೂ ಇದೆ. ಯಾವುದೇ ರೀತಿಯ ದೇಹದ ಅಸಹಜತೆಯನ್ನು ನಿರ್ಲಕ್ಷ್ಯ ಮಾಡದೆಯೇ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಡಾ. ರವಿಕುಮಾರ್ ಸಲಹೆ ನೀಡಿದರು.

ಆರೋಗ್ಯ ಶಿಬಿರದಲ್ಲಿ ಕಮ್ಮತಹಳ್ಳಿಯ ಮುಖಂಡರಾದ ಜಯಣ್ಣ, ಎನ್. ಸಿದ್ದಪ್ಪ, ಕೆ.ಯು. ಮುರುಗೇಶ್, ಕೆ.ಎಸ್. ತಿಪ್ಪೇಶ್, ಮರುಳ ಸಿದ್ದೇಶ್, ಕೆ.ಎಲ್. ಪಂಪಾಪತಿ, ಸುರೇಶ್ ಸೇರಿದಂತೆ ಸರ್ವ ಸಹಕಾರ ನೀಡಿ ಭಾಗವಹಿಸಿದ್ದರು.

ಆರೈಕೆ ಆಸ್ಪತ್ರೆಯ ವೈದ್ಯಕೀಯ ತಂಡದಿಂದ ಡಾ. ಆನಂದ್, ಡಾ. ಹನುಮಂತಯ್ಯ, ಡಾ.ಸಂದೀಪ್, ಡಾ. ಕೀರ್ತಿ ಚಿಕಿತ್ಸೆ ಮತ್ತು ಸಲಹೆ ನೀಡಿದರು. ನುಂಕೇಶ್, ಟ್ರಸ್ಟ್ ಸಿಬ್ಬಂದಿಗಳಾದ ವಿನೋದ್ ಕುಮಾರ್, ಶರತ್, ಸುದೀಪ್, ಕಿರಣ್ ಆಲೂರ್, ಯುವ ನಾಯಕರಾದ ಹರೀಶ್. ಡಿ.ಎಸ್, ನಿಖಿಲ್ ಭಾಗವಹಿಸಿದ್ದರು.

## ಜೆ.ಕೆ. ಕೊಟ್ರಬಸಪ್ಪ ನಿಧನಕ್ಕೆ ನಾಳೆ ಶ್ರದ್ಧಾಂಜಲಿ ಸಭೆ

ದಾವಣಗೆರೆ, ಫೆ. 26 - ಕುರುಬ ಸಮಾಜದ ಹಿರಿಯ ಮುಖಂಡರೂ, ಶ್ರೀ ಬೀರೇಶ್ವರ ದೇವಸ್ಥಾನ ಟ್ರಸ್ಟ್ ಕಾರ್ಯದರ್ಶಿಗಳೂ, ಶ್ರೀ ಬೀರೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳೂ, ನಗರ ದೇವತೆ ದುಗ್ಗಮ್ಮ ದೇವಸ್ಥಾನದ ಧರ್ಮದರ್ಶಿಗಳೂ ಆದ ಜೆ.ಕೆ.ಕೊಟ್ರಬಸಪ್ಪ ಅವರ ನಿಧನಕ್ಕೆ ನಾಡಿದ್ದು ದಿನಾಂಕ 28ರ ಬುಧವಾರ ಬೆಳಿಗ್ಗೆ 10.30 ಕ್ಕೆ ಶ್ರೀ ಬೀರೇಶ್ವರ ದೇವಸ್ಥಾನದ ಆವರಣದಲ್ಲಿ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಬಿ.ಹೆಚ್.ಪರುಶುರಾಮಪ್ಪ ಇವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆ ಕರೆಯಲಾಗಿದೆ.

ಸಮಾಜದ ಮುಖಂಡರು ಹಾಗೂ ಸಮಾಜದ ಎಲ್ಲಾ ಘಟಕಗಳ ಪದಾಧಿಕಾರಿಗಳು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಲು ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿಯೂ ಆದ ವಕೀಲ ಲೋಕಿಕೆರೆ ಸಿದ್ದಪ್ಪ ಅವರು ಕೋರಿದ್ದಾರೆ.

## ನಗರದಲ್ಲಿ ಇಂದು

ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ 18 ವರ್ಷ ಮೇಲ್ಪಟ್ಟ ವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಎಂ.ಸಿ.ಸಿ. ಬಿ ಬ್ಲಾಕ್, ಐಎಂಎ ಸಭಾಂಗಣದ ಹಿಂದೆ ಓಂಕಾರಮ್ಮ ಪ್ರಕೃತಿ ಚಿಕಿತ್ಸಾ ಯೋಗ ಕೇಂದ್ರದಲ್ಲಿ ಇಂದಿನಿಂದ ಮಾರ್ಚ್ 3ರವರೆಗೆ ಬೆಳಿಗ್ಗೆ ಮತ್ತು ಸಂಜೆ 2 ಬ್ಯಾಚುಗಳಲ್ಲಿ ನಡೆಯ ಲಿದೆ. ವಿವರಕ್ಕೆ ಸಂಪರ್ಕಿಸಿ : 99005 01877, 77601 55659.

# ನಕಲಿ ದಾಖಲೆ ಸೃಷ್ಟಿಸಿ ಪಾರ್ಕ್‌ಗಳ ಕಬಳಿಕೆ

**ಪರಿಸರ ಸಂರಕ್ಷಣೆ ವೇದಿಕೆಯ ಗಿರೀಶ್ ದೇವರಮನೆ ಆರೋಪ**

ದಾವಣಗೆರೆ, ಫೆ. 26 - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪಾರ್ಕ್‌ಗಳನ್ನು ಭೂಗಳ್ಳರು ಹಾಗೂ ಪಾಲಿಕೆಯ ಕಂದಾಯ ಅಧಿಕಾರಿಗಳು ನಕಲಿ ದಾಖಲೆ ಸೃಷ್ಟಿಸಿ ಅಮಾಯಕರಿಗೆ ಮಾರುತ್ತಿದ್ದಾರೆ ಎಂದು ಪರಿಸರ ಸಂರಕ್ಷಣೆ ವೇದಿಕೆಯ ಅಧ್ಯಕ್ಷ ಗಿರೀಶ್ ದೇವರಮನೆ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಪಾಲಿಕೆ ವ್ಯಾಪ್ತಿಯಲ್ಲಿ 478 ಪಾರ್ಕ್‌ಗಳು ಇವೆ. ಆದರೆ, 70-80 ಪಾರ್ಕ್‌ಗಳು ಕಾಣೆಯಾಗಿವೆ. ಇವುಗಳ ಪತ್ತೆ ಬಗ್ಗೆ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದು ಹೇಳಿದರು.

ಒಂದೆಡೆ ಭೂಗಳ್ಳರು ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದಾರೆ. ಮತ್ತೊಂದೆಡೆ ಅಮಾಯಕ ಬಡವರಿಗೆ ಅನ್ಯಾಯ ಆಗುತ್ತಿದೆ. ಪಾಲಿಕೆ ಅಧಿಕಾರಿಗಳು ಇಂತಹ ಪ್ರಕರಣಗಳಲ್ಲಿ ಕೇವಲ ನೋಟಿಸ್ ಕೊಟ್ಟು ಸುಮ್ಮನಾಗುತ್ತಿದ್ದಾರೆ ಎಂದು ದೇವರಮನೆ ಆಕ್ಷೇಪಿಸಿದರು.

ಶಾಮನೂರು ಹಾಗೂ ನಿಟುವಳ್ಳಿ ಭಾಗಗಳಲ್ಲಿ ನಾಲ್ಕು ನಿವೇಶಗಳನ್ನು ಅಕ್ರಮ ದಾಖಲೆ ಬಳಸಿ ಮಾರಿರುವ ಮಾಹಿತಿ ಲಭ್ಯವಾಗಿವೆ.

ಇದರ ಪೈಕಿ ಒಂದರಲ್ಲಿ ಈಗಾಗಲೇ ಮನೆ ನಿರ್ಮಿಸಲಾಗಿದೆ. ಈ ಬಗ್ಗೆ ಪಾಲಿಕೆ ಹಾಗೂ ಜನಪ್ರತಿನಿಧಿಗಳಿಗೆ ಮಾಹಿತಿ ನೀಡಲಾಗುವುದು. ನ್ಯಾಯಾಲಯದಲ್ಲೂ ಪ್ರಕರಣ ದಾಖಲಿಸಲಾಗುವುದು ಎಂದವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕರುನಾಡ ಕನ್ನಡ ಸೇನೆಯ ಅಧ್ಯಕ್ಷ ಕೆ.ಟಿ. ಗೋಪಾಲ ಗೌಡ, ಪರಿಸರ ಸಂರಕ್ಷಣಾ ವೇದಿಕೆಯ ನಾಗರಾಜ್ ಸುರ್ವೆ, ಪ್ರಸನ್ನ ಬೆಳಕೆರೆ, ಮಾರುತಿ, ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು.

# ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ ಸಾಲಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಫೆ.14- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್ಖರು, ಪಾರ್ಸಿಗಳು ಹಾಗೂ ಆಂಗ್ಲೋ ಇಂಡಿಯನ್ ಜನಾಂಗಕ್ಕೆ ಸೇರಿದವರು ಸ್ವಯಂ ಉದ್ಯೋಗ ಯೋಜನೆಗೆ ಸಾಲ, ಸಹಾಯಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ವ್ಯಾಪಾರ, ಸಣ್ಣ ಪ್ರಮಾಣದ ಗುಡಿ ಕೈಗಾರಿಕೆ, ಸೇವಾ ಕ್ಷೇತ್ರ, ಕೃಷಿ ಆಧಾರಿತ ಚಟುವಟಿಕೆಗಳನ್ನು ಪ್ರಾರಂಭಿಸಲು ಸಾಲ ಮತ್ತು ಸಹಾಯಧನ ಪಡೆಯಬಹುದು. ಅರ್ಜಿ ಸಲ್ಲಿಸಲು ಫೆ.29 ಕೊನೆಯ ದಿನವಾಗಿರುತ್ತದೆ.

ವಿವರಕ್ಕೆ ಸಂಪರ್ಕಿಸಿ : ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕುರುಬರ ಹಾಸ್ಟೆಲ್ ಕಟ್ಟಡ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ-577002 ದೂ. ಸಂ:08192-232349

## ಲೋಕಿಕೆರೆಯಲ್ಲಿ ಇಂದು ವಿಶೇಷ ಪೂಜೆ

ಲೋಕಿಕೆರೆ ಗ್ರಾಮದ ಸಮೀಪವಿರುವ ತ್ರಿಕೂಟಾಚಲ ದೇವಾಲಯದ ಆವರಣದಲ್ಲಿ ಶ್ರೀ ಉಮಾ ಮಹೇಶ್ವರಸ್ವಾಮಿ, ಶ್ರೀ ವಿಜಯದುರ್ಗಾ ಪರಮೇಶ್ವರಿ ಅಮ್ಮನವರು, ಶ್ರೀ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವರುಗಳ ಪ್ರತಿಷ್ಠಾಪನೆ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ಲಕ್ಷ್ಮಿ ವೆಂಕಟರಮಣ ದೇವರ ಪ್ರತಿಷ್ಠೆ, ಶ್ರೀ ವೆಂಕಟೇಶ್ವರ ಸ್ವಾಮಿ ಹೋಮ, ಸಂಜೆ 5 ಕ್ಕೆ ಮಹಾಪೂಜೆ, ಅಷ್ಟಾವಧಾನ ಸೇವೆ ನಡೆಯಲಿದೆ.

## ಫೆ.28 ರೊಳಗೆ ಪಡಿತರ ವಿತರಣೆ ಮುಕ್ತಾಯಗೊಳಿಸಬೇಕು

ದಾವಣಗೆರೆ, ಫೆ. 26 - ನಾಡಿದ್ದು ದಿನಾಂಕ 29 ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ಅನ್ನಭಾಗ್ಯ ಯೋಜನೆಯ ದಶಮಾನೋತ್ಸವ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಸುವರ್ಣ ಮಹೋತ್ಸವ ಮತ್ತು ಪಡಿತರ ವಿತರಕರ ರಾಜ್ಯ ಮಟ್ಟದ ಸಮಾವೇಶ ಕಾರ್ಯಕ್ರಮಗಳು ನಡೆಯುವ ಹಿನ್ನಲೆಯಲ್ಲಿ ದಾವಣಗೆರೆ ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರು ಫೆಬ್ರವರಿ-2024 ರ ಮಾಹೆಯ ಪಡಿತರ ವಿತರಣೆಯನ್ನು ನಾಡಿದ್ದು 28 ರೊಳಗೆ ಪೂರ್ಣಗೊಳಿಸಬೇಕು.

ಬಹುತೇಕ ನ್ಯಾಯಬೆಲೆ ಅಂಗಡಿಗಳ ಮಾಲೀಕರು ಹಾಗೂ ಪಡಿತರ ಫಲಾನುಭವಿಗಳು ಸಮಾವೇಶದಲ್ಲಿ ಭಾಗವಹಿಸುವ ಕಾರಣ, ಈ ತಿಂಗಳ ಕೊನೆಯ ದಿನಾಂಕದವರೆಗೆ ಕಾಯದೇ ಈವರೆಗೆ ಪಡಿತರ ಪಡೆಯದೇ ಇರುವ ಫಲಾನುಭವಿಗಳು ತಮ್ಮ ಪಾಲಿನ ಪಡಿತರವನ್ನು ಪಡೆಯಬೇಕೆಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕ ಸಿದ್ದರಾಮ ಮಾರಿಹಾಳ್ ತಿಳಿಸಿದ್ದಾರೆ.

# ಶ್ರೀ ಮಲ್ಲಿಕಾರ್ಜುನ ಮೋಟಾರ್ಸ್‌ನಲ್ಲಿ 18 ಇ-ಲೂನಾ ವಿತರಣೆ



ದಾವಣಗೆರೆ,ಫೆ. 26- ನಗರದ ಶ್ರೀ ಮಲ್ಲಿಕಾರ್ಜುನ ಮೋಟಾರ್ಸ್ ಮತ್ತು ಸ್ಕೂಟರ್ ಮಾರ್ಟ್ ಶೋ ರೂಮ್‌ನಲ್ಲಿ ಮಲ್ಲಿಕಾರ್ಜುನ ಸಮೂಹ ಸಂಸ್ಥೆಯ ಅಧ್ಯಕ್ಷ ಎನ್. ಜೆ. ಗುರುಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ 18 ಇ-ಲೂನಾಗಳನ್ನು ಗ್ರಾಹಕರಿಗೆ ವಿತರಿಸಲಾಯಿತು.

ಕೈನೆಟಿಕ್ ಗ್ರೀನ್ ಎನರ್ಜಿ ಮತ್ತು ಪವರ್ ಸಲ್ಯೂಷನ್ ಲಿಮಿಟೆಡ್ ಕಂಪನಿ ಪೂನಾದ ಉಪಾಧ್ಯಕ್ಷ ವಿಜಯ ಭಟ್ ಮಾತನಾಡಿ, ಈ ಲೂನಾ ಪರಿಸರ ಪ್ರೇಮಿಯಾಗಿದ್ದು, ಸ್ವಚ್ಛ ಭಾರತ, ಹಸಿರು ಕ್ರಾಂತಿಗೆ ನಾವೆಲ್ಲ ನಾಂದಿ ಹಾಡೋಣ ಎಂದು ತಿಳಿಸಿದರು.

ಕಂಪನಿಯ ರೀಜನಲ್ ಮ್ಯಾನೇಜರ್ ಕಾರ್ತಿಕ್, ಏರಿಯಾ ಮ್ಯಾನೇಜರ್ ವಿನಯ್, ಸರ್ವಿಸ್ ಮ್ಯಾನೇಜರ್ ಅರುಣ್ ಸಭೆಯಲ್ಲಿ ಹಾಜರಿದ್ದರು. ಎನ್. ಜಿ.ಚಂದ್ರಶೇಖರ್ ಸ್ವಾಗತಿಸಿದರು. ಪ್ರೊ.ಶಕುಂತಲಾ ಗುರುಸಿದ್ದಯ್ಯ 1970- 80ರ ದಶಕದಲ್ಲಿ, ತಮ್ಮ ಬದುಕಿಗೆ 'ಚೆಲ್ ಮೇರಿ ಲೂನಾ' ಹೇಗೆ ಅನುಕೂಲಕರವಾಗಿತ್ತು ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು. ಎನ್. ಜಿ ಸಿದ್ದೇಶ್ ವಂದಿಸಿದರು.

## ಲೋಕಸಭಾ ಚುನಾವಣೆ : ಮಲೇಬೆನ್ನೂರಿನಲ್ಲಿ ಮೂಲಭೂತ ಸೌಲಭ್ಯಗಳ ಪರಿಶೀಲನೆ



ಮಲೇಬೆನ್ನೂರು, ಫೆ.26- ಲೋಕಸಭಾ ಚುನಾವಣೆಯ ದಾವಣಗೆರೆ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಶ್ರೀಮತಿ ಭಾವನಾ ಬಸವರಾಜ್ ಅವರು ಸೋಮವಾರ ಮಲೇಬೆನ್ನೂರು ಪಟ್ಟಣದ ಎಲ್ಲಾ 21 ಮತಗಟ್ಟೆಗಳನ್ನು ಪರಿಶೀಲನೆ ಮಾಡಿದರು. ಮತಗಟ್ಟೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಕುರಿತು ಮಾಹಿತಿ ಪಡೆದುಕೊಂಡರು. ಉಪ ತಹಸೀಲ್ದಾರ್ ಆರ್.ರವಿ, ಸೆಕ್ಟರ್ ಅಧಿಕಾರಿಗಳಾದ ಉಮೇಶ್, ಶಿವರಾಜ್, ಗ್ರಾಮಲೆಕ್ಕಾಧಿಕಾರಿ ಅಣ್ಣಪ್ಪ ಮತ್ತು ಮಾರುತಿ ಈ ವೇಳೆ ಹಾಜರಿದ್ದರು.

**REQUIRED**
FOR TWO WHEELER ELECTRIC VEHICLES
SALES CONSULTANT/ MANAGER
for Reputed Dealership showroom
Having completed
a) Degree/ Diploma
b) Minimum 2 years of Sales Experience
c) Also have 2 wheeler license
Walk In Interview, Call : 95914 97776
Email Id : chandradvg23@gmail.com

# 'ಅಧ್ಯಾತ್ಮದಿಂದ ಅನ್ನದಾತರ ಸಬಲೀಕರಣ' ಅನ್ನದಾತರಿಗಾಗಿ ವಿಶೇಷ ಕಾರ್ಯಕ್ರಮ

**ನಗರದ ಬ್ರಹ್ಮಾಕುಮಾರೀಸ್ ಸಂಸ್ಥೆಯಲ್ಲಿ ಇಂದು**

ಅಂತರರಾಷ್ಟ್ರೀಯ ಮಟ್ಟದ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಸ್ಥಳೀಯ ಶಾಖೆಯಿಂದ 'ಅಧ್ಯಾತ್ಮದಿಂದ ಅನ್ನದಾತರ ಸಬಲೀಕರಣ' ವಿಷಯ ಕುರಿತಂತೆ ಅನ್ನದಾತರಿಗಾಗಿ ವಿಶೇಷ ಕಾರ್ಯಕ್ರಮವೊಂದನ್ನು ಇಂದು ಹಮ್ಮಿಕೊಳ್ಳಲಾಗಿದೆ.

ಬ್ರಹ್ಮಾಕುಮಾರೀಸ್ ಸಂಸ್ಥೆಯು ವಿಶ್ವವನ್ನು ಪರಿವರ್ತಿಸುವ ದಿಸೆಯಲ್ಲಿ ರಚಿಸಿರುವ 18 ವಿಭಾಗಗಳಲ್ಲೊಂದಾಗಿರುವ ರಾಜಯೋಗ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನದ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ವಿಭಾಗದ ಆಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿದೆ.

ಇಂದು ಸಂಜೆ 5 ಗಂಟೆಗೆ ಸ್ಥಳೀಯ ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ 'ಶಿವಧ್ಯಾನ ಮಂದಿರ'ದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದೆ ಎಂದು ಸಂಸ್ಥೆಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ತಿಳಿಸಿದ್ದಾರೆ.

ಬ್ರಹ್ಮಾಕುಮಾರೀಸ್ ಸಂಸ್ಥೆಯ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ವಿಭಾಗದ ಅಧ್ಯಕ್ಷರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಸರಳಾಜಿ ಕಾರ್ಯಕ್ರಮವನ್ನು ನಡೆಸಲಿದ್ದಾರೆ. ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ವಿಭಾಗದ ಉಪಾಧ್ಯಕ್ಷರಾದ ರಾಜಯೋಗಿ ಬ್ರಹ್ಮಾಕುಮಾರ ರಾಜು ಅವರು ವಿಶೇಷ ಉಪನ್ಯಾಸ ನೀಡಲಿದ್ದು, ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ವಿಭಾಗದ ರಾಷ್ಟ್ರೀಯ ಸಂಯೋಜಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಸುನಂದಾಜಿ ದಿಕ್ಸೂಚಿ ಮಾತುಗಳನ್ನಾಡುವರು.

ಬ್ರಹ್ಮಾಕುಮಾರೀಸ್ ಸಂಸ್ಥೆಯ ಹುಬ್ಬಳ್ಳಿ ವಲಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು.

ಜಿಲ್ಲಾ ಕೃಷಿ ಇಲಾಖೆ ಉಪ ನಿರ್ದೇಶಕ ಎಸ್. ಅಶೋಕ, ಜಿಲ್ಲಾ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಜಿ.ಸಿ. ರಾಘವೇಂದ್ರ ಪ್ರಸಾದ್, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಟಿ. ಎನ್. ದೇವರಾಜ್, ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ತೇಜಸ್ವಿ ವಿ. ಪಟೇಲ್, ರಾಜ್ಯ ರೈತ ಸಂಘದ ಉಪಾಧ್ಯಕ್ಷ ಅರುಣಕುಮಾರ್ ಕುರುಡಿ ಅವರುಗಳು ವಿಶೇಷ ಆಹ್ವಾನಿತರಾಗಿ ಆಗಮಿಸುವರು.

**ಸಂಕ್ಷಿಪ್ತ ಮಾಹಿತಿ :** ಕೃಷಿ ಪ್ರಕ್ರಿಯೆಯಲ್ಲಿ ರಾಜಯೋಗ ಧ್ಯಾನದ ಶಕ್ತಿಯನ್ನು ಬಳಸುವ ನಿಟ್ಟಿನಲ್ಲಿ ಬ್ರಹ್ಮಾಕುಮಾರೀಸ್ ಸಂಸ್ಥೆಯು ರೈತರಿಗೆ ಪರಿಚಯಿಸಿರುವ 'ಸುಸ್ಥಿರ ಯೋಗ ಕೃಷಿ' ಕುರಿತಂತೆ ರೈತ ಬಾಂಧವರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರಪಂಚದ್ಯಾಂತ ಈ ಕಾರ್ಯಕ್ರಮ ನಡೆಯುತ್ತಿದ್ದು, ಸಂಸ್ಥೆಯ ರಾಜಯೋಗ ತಜ್ಞರು ಮತ್ತು ಸುಸ್ಥಿರ ಯೋಗ ಕೃಷಿಯಲ್ಲಿ ಅನುಭವ ಪಡೆದ ರೈತರು ಈ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

ಸಮಕಾಲೀನ ಕೃಷಿಯಲ್ಲಿ ಅಸ್ತಿತ್ವದಲ್ಲಿರುವ ಸಮಸ್ಯೆಗಳನ್ನು ಅಧ್ಯಾತ್ಮಿಕತೆಯ ಮೂಲಕ ಮತ್ತು ರಾಜಯೋಗ ಧ್ಯಾನದ ಅಭ್ಯಾಸದಿಂದ ಸುಲಭವಾಗಿ ನಿವಾರಿಸಬಹುದು ಎಂದು ವಿಶ್ವದ ಸರ್ವೋಚ್ಚ ಶಕ್ತಿವಂತ ಪರಮಪಿತ ಶಿವ ಪರಮಾತ್ಮನು ತಿಳಿಸಿದ್ದು, ಇದನ್ನು ರಾಜಯೋಗ ತಜ್ಞರು ಇಂತಹ ಕಾರ್ಯಕ್ರಮಗಳ ಮೂಲಕ ರೈತ ಬಾಂಧವರಿಗೆ ಮನವರಿಕೆ ಮಾಡಿಕೊಡುವ ಸೇವೆ ಮಾಡುತ್ತಿದ್ದಾರೆ ಎಂದು ಲೀಲಾಜಿ ವಿವರಿಸಿದ್ದಾರೆ.

ರೈತ ಬಾಂಧವರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಲೀಲಾಜಿ ಕೋರಿದ್ದಾರೆ.

**ಅಂತಃಕರಣ ಕ್ಲಿನಿಕ್**
**MINDSS NEUROLINKS**
ವಿಶ್ವವಿಖ್ಯಾತ ಪ್ರಸಿದ್ಧ ನುರಿತ ನರರೋಗ ತಜ್ಞರಿಂದ
ನಿಮ್ಮ ಸಮಸ್ಯೆಗಳಿಗೆ
ಚಿಕಿತ್ಸೆ ಮತ್ತು ಸಲಹೆಗಳನ್ನು ನೀಡಲಾಗುತ್ತದೆ...
(ನಿರಾಸಕ್ತಿ, ಆಂತಕ, ಭಯ, ತಲೆನೋವು, ಬೆನ್ನು ಹುರಿ, ಇತರೆ ನೋವುಗಳು, ಗಾಬರಿ, ಕೆಟ್ಟ ಆಲೋಚನೆಗಳು, ಗೀಳು, ನಿದ್ರಾಹೀನತೆ, ಸ್ವಪ್ನ ದೋಷ, ಪುರುಷತ್ವದ ತೊಂದರೆಗಳು, ಶೀಘ್ರ ಸ್ಖಲನ ಶಿಷ್ನದ ನಿಮಿರುವಿಕೆ ಇತ್ಯಾದಿ ನರರೋಗಗಳ ಸಮಸ್ಯೆಗೆ ಸಂಪರ್ಕಿಸಿ.)
ಸಲಹೆ ಫೀಸ್ ಕೇವಲ 400 ರೂ.ಗಳು ಮಾತ್ರ
ಸಂಪರ್ಕಿಸಿ :
ಡಾ|| ಸೋಂಪುರ ಸುಶೀಲ್‌ಕುಮಾರ್
ನುರಿತ ನರರೋಗ, ಮಾನಸಿಕ ಹಾಗೂ ಲೈಂಗಿಕ ತಜ್ಞ ವೈದ್ಯರು
ಫೋನ್ : 88849 76550

## ನಾಳೆ ಧರ್ಮಸ್ಥಳಕ್ಕೆ ಪಾದಯಾತ್ರೆ

ದಾವಣಗೆರೆ, ಫೆ. 26 - ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥಸ್ವಾಮಿ ಪಾದಯಾತ್ರೆ ಸೇವಾ ಸಮಿತಿ ವತಿಯಿಂದ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ನಾಡಿದ್ದು ದಿನಾಂಕ 28 ರಂದು ಬೆಳಗಿನ ಜಾವ 3 ಗಂಟೆಗೆ ನಗರದ ಬಂಬೂಬಜಾರ್ ರಸ್ತೆಯ ಮಟ್ಟಿಕಲ್ಲು ಶ್ರೀ ಮರಡಿ ಬಸವೇಶ್ವರ ಸ್ವಾಮಿ ದೇವಸ್ಥಾನದಿಂದ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಪಾದಯಾತ್ರೆ ಹೊರಡಲಾಗುವುದು ಎಂದು ಸಮಿತಿ ಕಾರ್ಯದರ್ಶಿ ಕೇಶವಮೂರ್ತಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಡಿದ್ದು ದಿನಾಂಕ 28 ರಂದು ಶ್ರೀ ಮರಡಿ ಬಸವೇಶ್ವರ ಸ್ವಾಮಿ ದೇವಸ್ಥಾನದಿಂದ ಪಾದಯಾತ್ರೆ ಹೊರಟು ಅತ್ತಿಗೆರೆ, ಬಾಡಾ, ದೇವರಹಳ್ಳಿ, ಚನ್ನಗಿರಿ, ಬುಕ್ಕಾಂಬುದಿ, ಹಣ್ಣೆ, ಬೀರೂರು, ಕಂಸಾಗರ, ಚಿಕ್ಕಮಗಳೂರು, ಕಬ್ಬಿಣಸೇತುವೆ, ಭೂತನಕಾಡು, ಕೊಟ್ಟಿಗೆಹಾರ, ಚಾರ್ಮಾಡಿ ಘಾಟ್ ಮಾರ್ಗವಾಗಿ ಮಾರ್ಚ್ 7 ರಂದು ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿಯ ದರ್ಶನ ಪಡೆದು ವಿಶ್ರಾಂತಿ ಪಡೆಯಲಾಗುವುದು ಎಂದರು. ಮಾರ್ಚ್ 8 ರಂದು ಧರ್ಮಸ್ಥಳದಲ್ಲಿ ಜರುಗುವ ಮಹಾಶಿವರಾತ್ರಿ ಆಚರಣೆಯ ನಂತರ ದಾವಣಗೆರೆಗೆ ಹಿಂದಿರುಗಲಾಗುವುದು. ಈ ಬಾರಿ 150 ಕ್ಕೂ ಹೆಚ್ಚು ಪಾದಯಾತ್ರಿಗಳು ಭಾಗವಹಿಸಲಿದ್ದು, ಪಾದಯಾತ್ರೆಯಲ್ಲಿ ಭಾಗವಹಿಸಲು ಇಚ್ಛಿಸುವ ಭಕ್ತರು 9035216933 ಅಥವಾ 9986630107 ಗೆ ಸಂಪರ್ಕಿಸಬಹುದು.

ಪಾದಯಾತ್ರಿಗಳಿಗೆ ಉಚಿತ ಭೋಜನ ಹಾಗೂ ವಿಶ್ರಾಂತಿ ವ್ಯವಸ್ಥೆ ಇರುತ್ತದೆ. ಯಾವುದೇ ರೀತಿಯ ಶುಲ್ಕವಿರುವುದಿಲ್ಲ ಎಂದು ಹೇಳಿದರು. ರಾಜನಾಯ್ಕ, ಹೆಚ್.ಶಂಕರ್, ಅಕ್ಕಮ್ಮ, ದೇವೀರಮ್ಮ ಪತ್ರಿಕಾಗೋಷ್ಠಿಯಲ್ಲಿದ್ದರು.

## ಸಂವಿಧಾನದ ಆಶಯದಂತೆ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಧೀಶರು




ದಾವಣಗೆರೆ, ಫೆ.26- ಸಂವಿಧಾನದ ಪ್ರಮುಖ ಅಂಗವಾದ ನ್ಯಾಯಾಂಗವು ಕಳೆದ 75 ವರ್ಷಗಳಲ್ಲಿ ಜನರ ವಿಶ್ವಾಸವನ್ನು ಉಳಿಸಿಕೊಂಡು ಬರುವಲ್ಲಿ ನ್ಯಾಯಾಧೀಶರು ಮತ್ತು ವಕೀಲರ ಪಾತ್ರ ಪ್ರಮುಖವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅಭಿಪ್ರಾಯಪಟ್ಟರು.

ಅವರು ಇಂದು ಜಿಲ್ಲಾ ವಕೀಲರ ಸಾಂಸ್ಕೃತಿಕ ಸಭಾ ಭವನದಲ್ಲಿ ನೂತನವಾಗಿ ವರ್ಗಾವಣೆಗೊಂಡು ಬಂದಿರುವ ಪ್ರಧಾನ ಸಿವಿಲ್ ಜಡ್ಜ್ ಹೆಚ್.ಡಿ.ಗಾಯತ್ರಿ ಅವರಿಗೆ ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ದೇಶವು ಗಣರಾಜ್ಯದ ಅಮೃತ ಮಹೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಮತ್ತು ಗಣತಂತ್ರ ವ್ಯವಸ್ಥೆಯಲ್ಲಿ ನ್ಯಾಯಾಂಗದ ಪಾತ್ರ ಬಹಳ ಮುಖ್ಯವಾಗಿದ್ದು, ನ್ಯಾಯಾಧೀಶರು ಮತ್ತು ವಕೀಲರು ನ್ಯಾಯಾಂಗ ರಥದ ಎರಡು ಚಕ್ರಗಳಾಗಿದ್ದು, ರಥವನ್ನು ಮುನ್ನಡೆಸುವ ಜವಾಬ್ದಾರಿ ನಮ್ಮ ಮೇಲಿದೆ. ವಿವಾದಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವ ಮೂಲಕ ನ್ಯಾಯಾಂಗದ ಘನತೆಯನ್ನು ಕಾಪಾಡಿಕೊಂಡು ಹೋಗಬೇಕಾಗಿದೆ ಎಂದು ತಿಳಿಸಿದರು.

ನೂತನವಾಗಿ ವರ್ಗಾವಣೆಗೊಂಡು ಬಂದಿರುವ ನ್ಯಾಯಾಧೀಶರಾದ ಹೆಚ್.ಡಿ. ಗಾಯತ್ರಿಯವರು ಮಾತನಾಡಿ, ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲು ಪ್ರಯತ್ನಿಸುತ್ತೇವೆ ಎಂದರು. ಪ್ರಕರಣಗಳ ವಿಲೇವಾರಿಯಲ್ಲಿ ಹಿರಿಯ ವಕೀಲರು, ಹಿರಿಯ ನ್ಯಾಯಾಧೀಶರ ಸಹಕಾರದಿಂದ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತೇವೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್.ಅರುಣ್‌ಕುಮಾರ್ ಮಾತನಾಡಿ, ಜಿಲ್ಲಾ ವಕೀಲರ ಸಂಘವು ನ್ಯಾಯಾಲಯದ ಕಾರ್ಯಕಲಾಪಗಳಲ್ಲಿ, ಪ್ರಕರಣಗಳ ವಿಲೇವಾರಿಯಲ್ಲಿ ನ್ಯಾಯಾಧೀಶರಿಗೆ ಗೌರವ ಕೊಡುವ ಮೂಲಕ ಅತೀ ಹೆಚ್ಚಿನ ಸಹಕಾರವನ್ನು ನೀಡುತ್ತಾ ಬಂದಿದೆ. ಲೋಕ ಅದಾಲತ್‌ನಲ್ಲಿ ಅತೀ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡುವ ಮೂಲಕ ಹೈಕೋರ್ಟ್‌ನ ಪ್ರಶಂಸನಾ ಪತ್ರಕ್ಕೆ ಸಂಘವು ಭಾಜನವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ವಿ. ವಿಜಯಾನಂದ, ಶ್ರೀಪಾದ ಎನ್., ದಶರಥ್ ಬಿ., ಪ್ರವೀಣ್ ಕುಮಾರ್ ಆರ್. ಎನ್., ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಸ್.ಜಿ. ಸಲಗೆರೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ನ್ಯಾಯಾಧೀಶರುಗಳಾದ ನಿವೇದಿತಾ, ರೇಷ್ಮಾ, ಅಫ್ತಾಬ್, ಮಲ್ಲಿಕಾರ್ಜುನ್, ಪ್ರಶಾಂತ್, ಸಿದ್ಧರಾಜು, ನಾಜಿಯಾ ಕೌಸರ್ ಮತ್ತು ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್. ಬಸವರಾಜ್, ಸಹಕಾರ್ಯದರ್ಶಿ ಎಸ್. ಮಂಜುನಾಥ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜಿಲ್ಲಾಮಟ್ಟದ ಕಬಡ್ಡಿ ಪಂದ್ಯ : ನಗರದಲ್ಲಿ ನಾಡಿದ್ದು ತಂಡಗಳ ಆಯ್ಕೆ ಪ್ರಕ್ರಿಯೆ

ದಾವಣಗೆರೆ, ಫೆ. 26 - ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ಹಾಗೂ ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ಜಿಲ್ಲಾ ಮಟ್ಟದ ಹೊನಲು-ಬೆಳಕಿನ ಕಬಡ್ಡಿ ಪಂದ್ಯಾವಳಿಯನ್ನು ಮಾರ್ಚ್ 28 ರಿಂದ ಮಾರ್ಚ್ 31 ರವರೆಗೆ ಪ್ರತಿದಿನ ಸಂಜೆ 5ರಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಪಂದ್ಯಾವಳಿಯಲ್ಲಿ ಒಟ್ಟು 8 ತಂಡಗಳು ಭಾಗವಹಿಸುತ್ತಿದ್ದು, ಲೀಗ್ ಕಮ್ ನಾಕೌಟ್ ಮಾದರಿಯಲ್ಲಿ ಪಂದ್ಯಗಳನ್ನು ಆಡಿಸಲಾಗುವುದು. ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ತಂಡಕ್ಕೆ 1 ಲಕ್ಷ ರೂ., ದ್ವಿತೀಯ ಸ್ಥಾನ ಪಡೆದ ತಂಡಕ್ಕೆ 50 ಸಾವಿರ ರೂ., ಹಾಗೂ ತೃತೀಯ ಮತ್ತು ಚತುರ್ಥ ಸ್ಥಾನ ಪಡೆದ ತಂಡಗಳಿಗೆ ಕ್ರಮವಾಗಿ 25 ಸಾವಿರಗಳ ಬಹುಮಾನದ ಜೊತೆಗೆ ಆಕರ್ಷಕ ಟ್ರೋಫಿಗಳನ್ನು ನೀಡಲಾಗುವುದು. ಈ ಪಂದ್ಯಾವಳಿ ಯಲ್ಲಿ ಉತ್ತಮ ಪ್ರದರ್ಶನ ನೀಡಿದ ಕ್ರೀಡಾಪಟುಗಳಿಗೆ ಸರ್ವೋತ್ತಮ

**ಬಹುಮಾನದ ಜೊತೆಗೆ ಆಕರ್ಷಕ ಜನಪ್ರಿಯ ಟ್ರೋಫಿ**

ಆಟಗಾರ, ಉತ್ತಮ ದಾಳಿಗಾರ, ಉತ್ತಮ ಹಿಡಿತಗಾರ ಇವರಿಗೆ ವಿಶೇಷ ಬಹುಮಾನಗಳನ್ನು ನೀಡಲಾಗುವುದು ಎಂದು ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ಜಯಪ್ರಕಾಶ್ ಗೌಡ ತಿಳಿಸಿದ್ದಾರೆ.

ಪಂದ್ಯಾವಳಿಯಲ್ಲಿ ಭಾಗವಹಿಸುವ 08 ತಂಡಗಳ ಆಯ್ಕೆ ಪ್ರಕ್ರಿಯೆಯನ್ನು (ಹರಾಜು) ನಗರದ ಎಸ್. ಎಸ್. ಬಡಾವಣೆಯಲ್ಲಿರುವ ಶ್ರೀ ನೇತಾಜಿ ಸುಭಾಷ್ ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ನಾಡಿದ್ದು ದಿನಾಂಕ 29ರ ಗುರುವಾರ ಬೆಳಿಗ್ಗೆ 9.30 ಗಂಟೆಗೆ ನಡೆಸಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ ರಾಕೇಶ್ ಮೊ: 9448835907, 9741504529

## ಅಂಗನವಾಡಿ ಕಾರ್ಯಕರ್ತೆಯರಿಂದ ನಾಳೆ ಧರಣಿ

ದಾವಣಗೆರೆ, ಫೆ. 26 - ಕಳೆದ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕ ವಾದ್ರಿ 6ನೇ ಗ್ಯಾರಂಟಿಯಾಗಿ ಭರವಸೆ ನೀಡಿದ ಅಂಗನವಾಡಿ ಕಾರ್ಯಕರ್ತೆಯರ ಗೌರವಧನ 15,000 ರೂ., ಸಹಾಯಕಿಯರಿಗೆ 10,000 ರೂ.,ಗೆ ಗೌರವ ಧನ ಹೆಚ್ಚಿಸುವ ಹಾಗೂ ನಿವೃತ್ತರಿಗೆ 3 ಲಕ್ಷ ಇಡುಗಂಟು ನೀಡುವ ಭರವಸೆಯನ್ನು ಜಾರಿ ಮಾಡುವಂತೆ ಒತ್ತಾಯಿಸಿ ಫೆ. 28 ರಂದು ಎಲ್ಲಾ ಶಾಸಕರ ಕಚೇರಿ ಬಳಿ ಧರಣಿ ನಡೆಸಿ, ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸುವುದಾಗಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಜಿಲ್ಲಾ ಸಮಿತಿ ತಿಳಿಸಿದೆ.

## ಸಿರಿಧಾನ್ಯ ಸಂಸ್ಕರಣಾ ಘಟಕಗಳನ್ನು ಪ್ರೋತ್ಸಾಹಿಸಲು ಜಿಲ್ಲಾಧಿಕಾರಿಗಳ ಕರೆ

ದಾವಣಗೆರೆ, ಫೆ. 26 - ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕ ಸ್ಥಾಪನೆಗೆ ಅರ್ಜಿ ಸಲ್ಲಿಸಿದ ಫಲಾನುಭವಿಗಳ ಆಯ್ಕೆಗಾಗಿ ಫೆಬ್ರವರಿ 26 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಾಗೂ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರ ಅಧ್ಯಕ್ಷತೆಯಲ್ಲಿ ಸಮಿತಿ ಸಭೆ ಜರುಗಿತು.

ಈ ವೇಳೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಮಾತನಾಡಿ ವೈಯಕ್ತಿಕವಾಗಿ ಅತಿ ಸಣ್ಣ ಆಹಾರ ಸಂಸ್ಕರಣಾ ಉದ್ಯಮಗಳ ಸ್ಥಾಪನೆಗೆ ಹಲವಾರು ಅರ್ಜಿ ಸಲ್ಲಿಸಿದ್ದು ಹೆಚ್ಚಾಗಿ ಸಿರಿಧಾನ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡುವ ಮೂಲಕ ರಾಗಿ, ಜೋಳ, ನವಣೆ, ಸಾಮೆ, ಕೊರ್ಲೆ ಸೇರಿದಂತೆ ಇನ್ನಿತರೆ ಸಿರಿಧಾನ್ಯಗಳನ್ನು ಬಳಸುವ ಮೂಲಕ ಜನರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಇಂತಹ ಘಟಕಗಳ ಸ್ಥಾಪನೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಜನರಿಗೆ ಈ ಧಾನ್ಯಗಳು ಸುಲಭವಾಗಿ ಸಿಗುವಂತೆ ನೋಡಿಕೊಳ್ಳಬೇಕೆಂದರು.

ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರಾಘವೇಂದ್ರ ಪ್ರಸಾದ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.


**ಹುಟ್ಟುಹಬ್ಬದ ಶುಭಾಶಯಗಳು**

ದಿನಾಂಕ 27.02.2024ರ ಮಂಗಳವಾರ ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ನೀರಾವರಿ ಇಲಾಖೆಯ ನಿವೃತ್ತ ಅಭಿಯಂತರರೂ, ದಾವಣಗೆರೆ ಎಂಸಿಸಿ 'ಎ' ಬ್ಲಾಕ್ ಶ್ರೀ ಶಿರಡಿ ಸಾಯಿ ಮಂದಿರದ ಕಾರ್ಯದರ್ಶಿಗಳೂ, ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟದ ಗೌರವಾಧ್ಯಕ್ಷರೂ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ಖಜಾಂಚಿಗಳೂ, ಧಾರ್ಮಿಕ ಚಿಂತಕರೂ ಆದ **ಶ್ರೀ ಎಂ. ಶಿವಪ್ಪ** ಅವರಿಗೆ

87ನೇ ವರ್ಷದ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.



**ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ (ರಿ.)**
**ಶ್ರೀ ಶಿರಡಿ ಸಾಯಿ ಯೋಗ ಕೇಂದ್ರ, ದಾವಣಗೆರೆ.**


## ರೈತ ಕಾರ್ಮಿಕರ ವಿದ್ಯಾ ನಿಧಿಗೆ ಆದಾಯ ಪ್ರಮಾಣ ಪತ್ರ ಸಲ್ಲಿಕೆಗೆ ಸೂಚನೆ

ದಾವಣಗೆರೆ, ಫೆ. 26 - ಮುಖ್ಯ ಮಂತ್ರಿ ರೈತ ವಿದ್ಯಾನಿಧಿ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿಯಡಿ ವಿದ್ಯಾರ್ಥಿ ವೇತನ ಪಡೆಯಲು ಆದಾಯ ಪ್ರಮಾಣ ಪತ್ರವನ್ನು ಆನ್ ಲೈನ್ ಮೂಲಕ ಇದೇ ದಿನಾಂಕ 29 ರೊಳಗಾಗಿ ಸಲ್ಲಿಸಲು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ತಿಳಿಸಿದ್ದಾರೆ. (ಎಸ್‌ಎಸ್‌ಪಿ) ವಿದ್ಯಾರ್ಥಿಗಳ ಲಾಗಿನ್‌ನಲ್ಲಿ ಅವಕಾಶ ನೀಡಲಾಗಿದೆ.

ರೈತ ವಿದ್ಯಾನಿಧಿ ಕಾರ್ಯಕ್ರಮ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿ ಕಾರ್ಯಕ್ರಮದಡಿ ವಿದ್ಯಾರ್ಥಿ ವೇತನ ಪಡೆಯಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಪೋಷಕರ ಆದಾಯವು ರೂ. 2.5 ಲಕ್ಷ ಮೀರಿರಬಾರದು. ಪೋಷಕರ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಲು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಎಸ್.ಎಸ್.ಪಿ ವಿದ್ಯಾರ್ಥಿಗಳ ಲಾಗಿನ್ ನಲ್ಲಿ ಇದೇ ದಿನಾಂಕ 29 ರೊಳಗೆ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಪಡೆದು ಅಪ್‌ಲೋಡ್ ಮಾಡಬಹುದೆಂದು ಅವರು ತಿಳಿಸಿದ್ದಾರೆ.

## ಐ.ಎನ್.ಎಲ್.ಡಿ. ಅಧ್ಯಕ್ಷ ಹತ್ಯೆ : ಮಾಜಿ ಶಾಸಕನ ವಿರುದ್ಧ ಎಫ್.ಐ.ಆರ್.

ಚಂಡೀಘಡ, ಫೆ. 26 – ಇಂಡಿಯನ್ ನ್ಯಾಷನಲ್ ಲೋಕ್ ದಳ್ ರಾಜ್ಯ ಘಟಕದ ಅಧ್ಯಕ್ಷ ನಫೆ ಸಿಂಗ್ ರಾಠಿ ಹಾಗೂ ಪಕ್ಷದ ಕಾರ್ಯಕರ್ತನ ಹತ್ಯೆಗೆ ಸಂಬಂಧಿಸಿದಂತೆ ಹರಿಯಾಣದ ಮಾಜಿ ಶಾಸಕ ಹಾಗೂ ಇತರೆ 11 ಜನರ ವಿರುದ್ಧ ಪೊಲೀಸರು ಹತ್ಯೆ ಪ್ರಕರಣ ದಾಖಲಿಸಿದ್ದಾರೆ. ರಾಠಿ ಹಾಗೂ ಪಕ್ಷದ ಕಾರ್ಯಕರ್ತ ಜೈ ಕಿಶನ್ ಅವರನ್ನು ಭಾನುವಾರ ಗುಂಡಿಟ್ಟು ಹತ್ಯೆ ಮಾಡಲಾಗಿತ್ತು. ರಾಠಿ ಅವರ ಮೂವರು ಖಾಸಗಿ ಅಂಗರಕ್ಷಕರೂ ದಾಳಿಯಲ್ಲಿ ಗಾಯಗೊಂಡಿದ್ದರು. ಪೊಲೀಸರು ಈ ಬಗ್ಗೆ ಸೋಮವಾರ ಮಾಜಿ ಶಾಸಕ ನರೇಶ್ ಕೌಶಿಕ್ ಸೇರಿ ಹಲವರ ವಿರುದ್ಧ ಎಫ್.ಐ.ಆರ್. ದಾಖಲಿಸಿದ್ದಾರೆ.


**ಮಳಿಗೆ ಬಾಡಿಗೆಗೆ ಇದೆ**



ಕಮರ್ಷಿಯಲ್ ಸ್ಪೇಸ್ ಮೊದಲನೇ ಮಹಡಿಯಲ್ಲಿ 40x30 = 1200 ಚ.ಅಡಿವುಳ್ಳ ಮಳಿಗೆ ಬಾಡಿಗೆಗೆ ಇದೆ. ಬ್ಯಾಂಕ್, ಕಛೇರಿ ಮತ್ತು ಇನ್ನಿತರೆಗಳಿಗೆ ಲಭ್ಯವಿದೆ.

ವಿಳಾಸ : ಆನಗೋಡು, ಹೊಳಲ್ಕೆರೆ ರಸ್ತೆ, ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಎದುರು, ದಾವಣಗೆರೆ- 577556

ಸಂಪರ್ಕಿಸಿ : 99004 07093, 70225 51004


## ಗಜಲ್ ಗಾಯಕ ಪಂಕಜ್ ಉಧಾಸ್ ಇನ್ನಿಲ್ಲ



ಮುಂಬೈ, ಫೆ. 26 – ಹೆಸರಾಂತ ಗಜಲ್ ಗಾಯಕ ಪಂಕಜ್ ಉಧಾಸ್ ಅವರು ನಿಧನರಾಗಿದ್ದಾರೆ. ಅವರಿಗೆ 72 ವರ್ಷ ವಯಸ್ಸಾಗಿತ್ತು. ಅವರು ಸುದೀರ್ಘ ಕಾಲದ ಅಸ್ವಸ್ಥತೆಯಿಂದ ಬಳಲುತ್ತಿದ್ದರು.

'ನಾಮ್', 'ಸಾಜನ್' ಹಾಗೂ 'ಮೊಹ್ರಾ' ಸೇರಿದಂತೆ ಹಲವಾರು ಚಲನಚಿತ್ರಗಳ ಹಾಡುಗಳಿಂದ ಅವರು ಹೆಸರು ಮಾಡಿದ್ದರು.

## ನಗರದ ಶಾರದಾಂಬಾ ದೇವಸ್ಥಾನದಲ್ಲಿಂದು

ಶ್ರೀ ಗಣಪತಿ, ಶ್ರೀ ಶಾರದಾಂಬಾ, ಶ್ರೀ ಚಂದ್ರಮೌಳೀಶ್ವರ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನಗಳ ವಾರ್ಷಿಕೋತ್ಸವದ ಅಂಗವಾಗಿ ವಿಶೇಷ ಕಾರ್ಯಕ್ರಮಗಳನ್ನು ಇಂದು ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ 7ಕ್ಕೆ ಕಲಾ ಹೋಮ, 9 ಗಂಟೆಗೆ ಪೂರ್ಣಾಹುತಿ. 9.30ರಿಂದ ವಿಶೇಷ ಪೂಜೆಗಳು, ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 6ಕ್ಕೆ ಶ್ರೂಫಲ್ಗುಣಿ ಕಲಾತಂಡದಿಂದ ಶ್ರೀಚಕ್ರ ಮಹಿಮೆ ರೂಪಕ ಪ್ರದರ್ಶನಗೊಳ್ಳಲಿದೆ. 7 ಗಂಟೆಗೆ ಶ್ರೀ ಶಾರದಾಂಬಾ ದೇವಿಗೆ ಪಾಲಕಿ ಉತ್ಸವ ರಥ ಸೇವಾ, ಅಷ್ಟಾವಧಾನ ಕಾರ್ಯಕ್ರಮಗಳು ನಡೆಯಲಿವೆ.


ಜಾತ್ರೆ ಪ್ರಯುಕ್ತ
**ತೂಕದ ಲೆಕ್ಕದ ಬಟ್ಟೆ ಅಂಗಡಿ**
ಈಗ ಬಟ್ಟೆಗಳು ಒಂದು ಕಿಲೋಗೆ ಕೇವಲ
~~900~~/-, 500/ರೂ.
ಡಿಸ್ಕೌಂಟ್



**ಹೃದಯಪೂರ್ವಕ ಕೃತಜ್ಞತೆಗಳು**




ಹರಿಹರ ತಾಲ್ಲೂಕಿನ ಕೆ. ಬೇವಿನಹಳ್ಳಿ ಗ್ರಾಮದ ನೀರು ಬಳಕೆದಾರರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ನಮ್ಮನ್ನು ಅಧ್ಯಕ್ಷರು-ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ರೈತ ಬಾಂಧವರಿಗೆ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು.



ಬಿ.ಜಿ. ಮಲ್ಲಿಕಾರ್ಜುನಪ್ಪ, ಅಧ್ಯಕ್ಷರು
ಡಿ. ರಾಜಶೇಖರಪ್ಪ, ಉಪಾಧ್ಯಕ್ಷರು
ಬಿ.ಎ ರುದ್ರಮುನಿ, ನಿರ್ದೇಶಕರು
ಜಿ. ಕೊಟ್ರಪ್ಪ, ನಿರ್ದೇಶಕರು



ಎ.ಎಸ್. ಗುರುಬಸವರಾಜ್, ನಿರ್ದೇಶಕರು
ಶ್ರೀಮತಿ ರೇಣುಕಮ್ಮ, ನಿರ್ದೇಶಕರು
ಶ್ರೀಮತಿ ವೀರವೆಂಕಟಲಕ್ಷ್ಮಿ, ನಿರ್ದೇಶಕರು
ಟಿ. ರೇವಣಸಿದ್ದಪ್ಪ, ನಿರ್ದೇಶಕರು




ಹೆಚ್. ಜಯ್ಯಪ್ಪ, ನಿರ್ದೇಶಕರು
ಎಸ್. ವಿಶ್ವನಾಥ್, ನಿರ್ದೇಶಕರು
ನಾಗೇಶ್ವರರಾವ್, ನಿರ್ದೇಶಕರು
ಎ. ನಿರಂಜನಮೂರ್ತಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

**ಕೆ.ಬೇವಿನಹಳ್ಳಿ ನೀರು ಬಳಕೆದಾರರ ಸಹಕಾರ ಸಂಘ ನಿ., ಕೆ.ಬೇವಿನಹಳ್ಳಿ**



**SCIENCE ACADEMY (R.)**
(A UNIQUE CENTRE FOR P.U. CLASSES)
# 307 / 2B, PJ EXTENSION,
NEAR DISTRICT STADIUM, DAVANGERE – 02.

**ADMISSION STARTED FOR**



**CET–NEET CRASH COURSE**
Classes Starts from 21st March 2024

AND

**II PUC (PCMB) SUMMER CLASSES**
Classes Starts from 4th March 2024

* Subject Experts will engage the classes.
* Newly well Prepared study materials will be given.
* Only Few Seats are Available Join early

For more Details:
08192 - 457761,
9980368779,
9448178087.

HOSTEL FACILITY IS AVAILABLE FOR BOTH BOYS AND GIRLS